ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಜೂನ್ 06, 2022

ಸಂಪುಟ : 49 ಸಂಚಿಕೆ : 23 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com

## ಅಣೆಕಟ್ಟೆಗಳಿಗೆ ಹೂಳಿನ ಸಮಸ್ಯೆ

### ಕೆರೆಗಳಿಗೆ ನೀರು ತುಂಬುವುದರಲ್ಲಿ ಭವಿಷ್ಯ: ತರಳಬಾಳು ಶ್ರೀ

**ಜನತಾವಾಣಿ ಪತ್ರಿಕಾಲಯಕ್ಕೆ ಅನೌಪಚಾರಿಕ ಭೇಟಿ ನೀಡಿದ ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ**

ದಾವಣಗೆರೆ, ಜೂ. 5 - ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ಭಾನುವಾರ ಜನತಾವಾಣಿ ಸಂಪಾದಕ ಎಂ.ಎಸ್ ವಿಕಾಸ್ ಅವರ ನಿವಾಸಕ್ಕೆ ಭೇಟಿ ನೀಡಿ, ನಂತರ ಪತ್ರಿಕಾ ಕಚೇರಿಗೆ ಆಗಮಿಸಿ ಮಾತನಾಡಿದರು.

ಬೆಳೆ ವಿಮೆ, ರೈತರ ವಿಷಯಗಳು, ಕೆರೆಗಳಿಗೆ ನೀರು ತುಂಬುವ ಯೋಜನೆ, ಶಿಕ್ಷಣ ವಲಯದಲ್ಲಿ ಪ್ರಚಲಿತದಲ್ಲಿ ಆಗುತ್ತಿರುವ ಬೆಳವಣಿಗೆ ಸೇರಿದಂತೆ ಹಲವಾರು ವಿದ್ಯಮಾನಗಳ ಕುರಿತು ಪತ್ರಿಕೆಯ ಸಂಪಾದಕ ಎಂ.ಎಸ್. ವಿಕಾಸ್ ಅವರ ಜೊತೆ ಶ್ರೀಗಳು ವಿಚಾರ ವಿನಿಮಯ ನಡೆಸಿದರು.

ಪತ್ರಿಕೆಯ ಕಾರ್ಯ ನಿರ್ವಹಣೆ, ಸುದ್ದಿ ಸಂಗ್ರಹ, ಪುಟ ವಿನ್ಯಾಸ, ಮುದ್ರಣ ಸೇರಿದಂತೆ ದೈನಂದಿನ ಕಾರ್ಯನಿರ್ವಹಣೆಯ ಹಲವಾರು ವಿಷಯಗಳ ಕುರಿತು ಸಂಪಾದಕ ವಿಕಾಸ್ ಅವರು ಶ್ರೀಗಳಿಗೆ ಮಾಹಿತಿ ನೀಡಿದರು.

ಸುದ್ದಿ ಸಂಯೋಜನೆಗೆ ಬಳಸುವ ತಂತ್ರಾಂಶ, ಮುದ್ರಣದ ವ್ಯವಸ್ಥೆ, ಪುಟಗಳ ವಿನ್ಯಾಸದ ಕೆಲಸ ಸೇರಿದಂತೆ ಹಲವಾರು ವಿಷಯಗಳ ಕುರಿತು ಸ್ವಾಮೀಜಿ ಆಸಕ್ತಿಯಿಂದ ಮಾಹಿತಿ ಆಲಿಸಿದರು. ಇದೇ ವೇಳೆ ಪತ್ರಿಕಾ ಸಿಬ್ಬಂದಿಗೆ ತಾವು ರೂಪಿಸಿರುವ ವಚನಗಳ ತಂತ್ರಾಂಶ, ಗಣಕಾಷ್ಟಾಧ್ಯಾಯಿ ತಂತ್ರಾಂಶದ ಕುರಿತು ವಿವರಿಸಿದರು.

ಪ್ರಧಾನ ಮಂತ್ರಿ ಫಸಲು ಬಿಮಾ ಯೋಜನೆಯಲ್ಲಿ ಹಲವಾರು ಲೋಪಗಳಿವೆ. ಈ ಕುರಿತು ಕೇಂದ್ರ ಸರ್ಕಾರದ ಉನ್ನತರ ಜೊತೆ ಚರ್ಚಿಸಿದ್ದೇನೆ. ಶೀಘ್ರದಲ್ಲೇ ಈ ಕುರಿತು ಕೇಂದ್ರ ಕೃಷಿ ಸಚಿವರ ಹಂತದಲ್ಲಿ ಮತ್ತೆ ಗಮನ ಸೆಳೆಯುವುದಾಗಿ ಶ್ರೀಗಳು ಈ ಸಂದರ್ಭದಲ್ಲಿ ಹೇಳಿದರು.

ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಿಂದ ರೈತರು ನಿರೀಕ್ಷಿಸಿದಷ್ಟು ನೆರವು ಸಿಗುತ್ತಿಲ್ಲ. ಏಳು ವರ್ಷಗಳ 'ಹೊಸ್ತಿಲ ಇಳುವರಿ' (ಥ್ರೆಶೋಲ್ಡ್ ಯೀಲ್ಡ್) ಆಧರಿಸಿ ಇಡೀ ತಾಲ್ಲೂಕನ್ನು ಘಟಕವಾಗಿಸಿ ಪರಿಹಾರ ನೀಡುವ ಈಗಿರುವ ವ್ಯವಸ್ಥೆ ಸಮರ್ಪಕವಾಗಿಲ್ಲ. ಸಾಲ ಸಿಗುವುದಿಲ್ಲ ಎಂಬ ಕಾರಣಕ್ಕಾಗಿ ರೈತರು ವಿಮೆ ಪಡೆಯುತ್ತಿದ್ದಾರೆ ಎಂದು ಶ್ರೀಗಳು ಹೇಳಿದರು.

ಬೃಹತ್ ಅಣೆಕಟ್ಟೆಗಳಲ್ಲಿ ಹೂಳು ತುಂಬಿಕೊಳ್ಳುವುದು ಬಗೆಹರಿಸಲಾಗದ ಸಮಸ್ಯೆಯಾಗುತ್ತಿದೆ. ಇನ್ನು ಕೆಲವೇ ದಶಕಗಳಲ್ಲಿ ಸಾಕಷ್ಟು ಅಣೆಕಟ್ಟೆಗಳು ಸಮಸ್ಯೆಗೆ ಸಿಲುಕಲಿವೆ. ಈ ಹಿನ್ನೆಲೆಯಲ್ಲಿ ಕೆರೆಗಳಿಗೆ ನೀರು ತುಂಬುವ ಯೋಜನೆಯೇ ಭವಿಷ್ಯದ ನೀರಾವರಿ ಸಮಸ್ಯೆಗೆ ಸೂಕ್ತ 6ನೇ ಪುಟಕ್ಕೆ


ಜನತಾವಾಣಿ ಕಚೇರಿಯಲ್ಲಿ ಸಂಪಾದಕ ಎಂ.ಎಸ್. ವಿಕಾಸ್ ಅವರಿಂದ ತರಳಬಾಳು ಶ್ರೀಗಳಿಗೆ ಸನ್ಮಾನ


ಪತ್ರಿಕೆಯ ಪುಟ ವಿನ್ಯಾಸದ ಬಗ್ಗೆ ಚರ್ಚಿಸುತ್ತಿರುವ ಶ್ರೀಗಳು


ಎಂ.ಎಸ್. ವಿಕಾಸ್ ಅವರ ನಿವಾಸದಲ್ಲಿ ತರಳಬಾಳು ಶ್ರೀಗಳು

## ಪದಾಧಿಕಾರಿಗಳು 'ಸೇವಾ ಕರ್ತ'ರಾದರೆ ಸಮಸ್ಯೆಗಳು ಪರಿಹಾರ

### ಕಾ.ನಿ.ಪ ಸಂಘದ ಸಮಾರಂಭದಲ್ಲಿ ತರಳಬಾಳು ಜಗದ್ಗುರು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ

ದಾವಣಗೆರೆ, ಜೂ. 5 - ಸಂಘ, ಸಂಸ್ಥೆಗಳಿಗೆ 'ಪದಾಧಿಕಾರಿ'ಗಳಾಗುವ ಬದಲು 'ಸೇವಾ ಕರ್ತ'ರಾದರೆ, ಅಧಿಕಾರಕ್ಕಾಗಿ ಅನಾರೋಗ್ಯಕರ ಸ್ಪರ್ಧೆ ನಡೆಯುವುದನ್ನು ತಪ್ಪಿಸಬಹುದು ಎಂದು ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದ್ದಾರೆ.

ಕಾರ್ಯನಿರತ ಪತ್ರಕರ್ತರ ಸಂಘದ 2022-25ರ ಸಾಲಿನ ಪದಾಧಿಕಾರಿಗಳ ಸೇವಾ ಸ್ವೀಕಾರ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು. ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನ ಎಸ್. ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಲಿಂ. ಶ್ರೀ ಹೆಚ್.ಎನ್. ಷಡಾಕ್ಷರಪ್ಪ ವೇದಿಕೆಯಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಮಾರಂಭದ ಆಹ್ವಾನ ಪತ್ರಿಕೆಯಲ್ಲಿ 'ನೂತನ ಪದಾಧಿಕಾರಿಗಳ ಸೇವಾ ಸ್ವೀಕಾರ ಸಮಾರಂಭ' ಎಂದು ತಿಳಿಸಲಾಗಿದೆ. 'ಪದಾಧಿಕಾರಿ' ಹಾಗೂ 'ಸೇವಾ ಸ್ವೀಕಾರ' ಎರಡೂ ಪದಗಳು ಸಂಘರ್ಷದಲ್ಲಿವೆ. ಅಧಿಕಾರ ಇರುವ ಕಡೆ ಸೇವೆ ಇರುವುದಿಲ್ಲ, ಸೇವೆ ಇರುವ ಕಡೆ ಅಧಿಕಾರ ಇರುವುದಿಲ್ಲ ಎಂದು ಶ್ರೀಗಳು ಹೇಳಿದರು.

ಪದಾಧಿಕಾರಿ ಎನ್ನುವ ಬದಲು 'ಸೇವಾಕರ್ತರ ದೀಕ್ಷಾ ಸಮಾರಂಭ' ಎಂದಿದ್ದರೆ ಸೂಕ್ತವಾಗಿರುತ್ತಿತ್ತು. ಸೇವೆ ಮಾಡುವವರು ಎಷ್ಟಿದ್ದರೂ ಸಾಲದು. ಆಗ ಸಂಘ - ಸಂಸ್ಥೆಗಳ ಸ್ಥಾನಗಳಿಗೆ ಯಾವುದೇ ತಕರಾರು ಇರುವುದಿಲ್ಲ. ಅಂತಹ ಸೇವೆ ಮುಂದಿನವರಿಗೆ ಮೇಲ್ಪಂಕ್ತಿ ಆಗುತ್ತದೆ ಎಂದು ಶ್ರೀಗಳು ಹೇಳಿದರು.

ಡಿ.ವಿ. ಗುಂಡಪ್ಪನವರು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸಂಸ್ಥಾಪಕರಾಗಿದ್ದರು. ಅವರು ರಚಿಸಿದ್ದ 'ಮಂಕು ತಿಮ್ಮನ ಕಗ್ಗ' ಸಂಘದ ಅಲಿಖಿತ ಸಂವಿಧಾನ ಆಗಬೇಕು. ಬೈಲಾ ಏನೇ ಇರಲಿ, ಕಗ್ಗದಂತೆ ನಡೆದುಕೊಳ್ಳಬೇಕು ಎಂದವರು ಕಿವಿಮಾತು ಹೇಳಿದರು.

ಸುದ್ದಿ ಸಂಗ್ರಹ ಕಾರ್ಯವನ್ನು ದುಂಬಿಯ ಕಾರ್ಯ ನಿರ್ವಹಣೆಗೆ ಹೋಲಿಸಿದ ಶ್ರೀಗಳು, ದುಂಬಿಯು ಹೂವಿನಿಂದ ಮಕರಂದ ಸಂಗ್ರಹಿಸುವ ರೀತಿಯಲ್ಲಿ ಪತ್ರಕರ್ತರೂ ಸುದ್ದಿಯನ್ನು ಸಂಗ್ರಹಿಸಿ ವಿವೇಚನೆಯಿಂದ ಪತ್ರಿಕೆಗಳಲ್ಲಿ ಪ್ರಕಟಿಸುತ್ತಾರೆ. ಆದರೆ, ಅದೇ ಸುದ್ದಿಯನ್ನು ತಿರುಚಿ ಬರೆದರೆ ಜೇನು ಎದುರು ಬಂದವರನ್ನು ಅಕಾರಣವಾಗಿ ಕಚ್ಚಿದಂತೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ, ಪತ್ರಿಕೆಗಳು ಒಂದು ಅಂಕಣವನ್ನು ಶುಭ ಹಾಗೂ ಅಧ್ಯಾತ್ಮಿಕ ಚಿಂತನೆಗೆ ಮೀಸಲಿಡಬೇಕು. ಸಮಾಚಾರ ಪತ್ರಿಕೆಗಳು ಸದಾಚಾರ ಪತ್ರಿಕೆಗಳಾಗಿ ಜನಸೇವೆ ಮಾಡಬೇಕು ಎಂದು ಕರೆ ನೀಡಿದರು.

ಪತ್ರಿಕೆಗಳಲ್ಲಿ ಬರುವ ಒಂದು ವರದಿಯೂ ಸಮಾಜದ ಮೇಲೆ ಅಪಾರ ಪರಿಣಾಮ ಬೀರುತ್ತದೆ. ಹೀಗಾಗಿ ಪ್ರತಿಯೊಂದು 2ನೇ ಪುಟಕ್ಕೆ



### ಸಂಘದಲ್ಲಿ ರೋಚಕ ಫಲಿತಾಂಶ, ರಾಜಕಾರಣಿಗಳ ವರಸೆ: ವಿಕಾಸ್

ರಾಜಕಾರಣಿಗಳು ಹಾಗೂ ಚುನಾವಣೆಗಳ ಬಗ್ಗೆ ಪತ್ರಕರ್ತರು ಸಾಕಷ್ಟು ಟೀಕೆ - ಟಿಪ್ಪಣಿ ಮಾಡುತ್ತಾರೆ. ಆದರೆ, ಕಾರ್ಯನಿರತ ಪತ್ರಕರ್ತರ ಸಂಘದ ಚುನಾವಣೆ ಯಾವುದೇ ರಾಜಕೀಯ ಚುನಾವಣೆಗಿಂತ ಕಡಿಮೆ ಇರಲಿಲ್ಲ. ರಾಜಕೀಯ ಚುನಾವಣೆಗಳ ವರಸೆಯೇ, ಸಂಘದ ಚುನಾವಣೆಯಲ್ಲೂ ಕಂಡು ಬಂತು ಎಂದು ಜನತಾವಾಣಿ ಸಂಪಾದಕ ಎಂ.ಎಸ್.ವಿಕಾಸ್ ಹೇಳಿದರು.

ಪತ್ರಕರ್ತರು ಯಾವ ರೀತಿಯ ಆದರ್ಶಗಳನ್ನು ಬೇರೆಯವರಿಗೆ ಹೇಳುತ್ತಾರೋ, ಅದೇ ಆದರ್ಶಗಳ ರೀತಿಯಲ್ಲಿ ಮುಂದಿನ ದಿನಗಳಲ್ಲಿ ಪತ್ರಕರ್ತರ ಸಂಘ ಮುನ್ನಡೆಯಲಿ ಎಂದವರು ಹಾರೈಸಿದರು.

ಸಂಘದ ನಿಕಟಪೂರ್ವ ಅಧ್ಯಕ್ಷ ವೀರಪ್ಪ ಎಂ. ಬಾವಿ ಹಾಗೂ ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಅವರು ಪತ್ರಕರ್ತರ ಸಂಘಗಳ ಕಾರ್ಯ ನಿರ್ವಹಣೆ ಕುರಿತು ಮಾತನಾಡಿದರು.

ನಂತರದಲ್ಲಿ ಈ ವಿಷಯ ಪ್ರಸ್ತಾಪಿಸಿ ಮಾತನಾಡಿದ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಇಂದಿನ ಸಭೆಯು ಪತ್ರಕರ್ತರ ಆತ್ಮಾವಲೋಕನ ಸಭೆಯ ರೀತಿಯಲ್ಲಿದೆ. ಮುಂದಿನ ದಿನಗಳಲ್ಲಿ ಸರಿಯಾದ ಹಾದಿಯಲ್ಲಿ ಸಾಗಲು ಕಟ್ಟುನಿಟ್ಟಿನ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಹೇಳಿದರು.

**ದಾವಣಗೆರೆ ಜಿಲ್ಲೆ ಹೊರತು ಪಡಿಸಿ ಉಳಿದೆಲ್ಲ ಜಿಲ್ಲೆಗಳಲ್ಲೂ ಪತ್ರಿಕಾ ಭವನ ನಿರ್ಮಾಣವಾಗಿದೆ. ತಮ್ಮ ಅವಧಿಯಲ್ಲಿ ನಗರದಲ್ಲಿ ಪತ್ರಿಕಾ ಭವನ ನಿರ್ಮಿಸುವ ಕನಸು ನನಸು ಮಾಡುವ ಗುರಿ ಇದೆ.**

**- ಇ.ಎಂ. ಮಂಜುನಾಥ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ**

**ಸುದ್ದಿಗೆ ಎರಡು ಮುಖಗಳಿರುತ್ತವೆ. ಸತ್ಯದ ಒಳಗೆ ಇನ್ನೊಂದು ಸತ್ಯವಿರುತ್ತದೆ. ಪತ್ರಕರ್ತರು ವರದಿ ರೂಪಿಸುವಾಗ ಎಚ್ಚರಿಕೆ ವಹಿಸಬೇಕು. ಸಮಾಜದ ಓರೆಕೋರೆಗಳ ಮೇಲೆ ಬೆಳಕು ಚೆಲ್ಲಿ ಸಮಾಜಕ್ಕೆ ಬೆಳಕಾಗಬೇಕು.**

**- ಬಾ.ಮ. ಬಸವರಾಜಯ್ಯ, ಹಿರಿಯ ಪತ್ರಕರ್ತ**

**ಪತ್ರಕರ್ತರಾಗಿದ್ದ ಡಿ.ವಿ. ಗುಂಡಪ್ಪ, ಜನತಾವಾಣಿ ಸಂಸ್ಥಾಪಕ ಸಂಪಾದಕ ಹೆಚ್.ಎನ್. ಷಡಾಕ್ಷರಪ್ಪ ಹಾಗೂ ನಗರವಾಣಿ ಸಂಸ್ಥಾಪಕ ಸಂಪಾದಕ ಸಿ. ಕೇಶವಮೂರ್ತಿ ಅವರು ಪತ್ರಕರ್ತರಿಗೆ ಆದರ್ಶವಾಗಿದ್ದಾರೆ.**

**- ಬಿ.ಎನ್. ಮಲ್ಲೇಶ್, ಹಿರಿಯ ಪತ್ರಕರ್ತ**

**ತಮ್ಮ ಅವಧಿಯಲ್ಲಿ ಪತ್ರಿಕಾ ಭವನ ನಿರ್ಮಾಣಕ್ಕೆ ಪ್ರಯತ್ನ ನಡೆಸಲಾಗಿತ್ತು. ಪತ್ರಕರ್ತರ ಸಂಘಟನೆಗಳು ಒಂದಾಗಬೇಕು. ಆಗ ನಗರದಲ್ಲಿ ಉತ್ತಮ ಪತ್ರಿಕಾ ಭವನದ ನಿರ್ಮಾಣ ಸಾಧ್ಯ.**

**- ವೀರಪ್ಪ ಎಂ. ಬಾವಿ**
**ಕಾರ್ಯನಿರತ ಪತ್ರಕರ್ತರ ಸಂಘದ ನಿಕಟಪೂರ್ವ ಜಿಲ್ಲಾಧ್ಯಕ್ಷ**

## ಪೀರ್ ಪಾಷಾ ಬಂಗ್ಲೆ ಬಸವ ಕಲ್ಯಾಣವಾಗಿತ್ತು

**ವೀರಶೈವ-ಲಿಂಗಾಯತ ಸ್ವಾಮೀಜಿಗಳ ಪ್ರತಿಪಾದನೆ**

ಬೆಂಗಳೂರು, ಜೂ. 5 – ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿರುವ ಪೀರ್ ಪಾಷಾ ಬಂಗ್ಲೆಯು ಮೂಲತಃ ಬಸವ ಕಲ್ಯಾಣವಾಗಿತ್ತು ಎಂದು ಪ್ರತಿಪಾದಿಸಿರುವ ಕೆಲ ವೀರಶೈವ – ಲಿಂಗಾಯತ ಸ್ವಾಮಿಗಳು, ಈ ಬಗ್ಗೆ ಸಮೀಕ್ಷೆ ನಡೆಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಒತ್ತಾಯಿಸಿದ್ದಾರೆ.

ವಿಶ್ವದ ಮೊದಲ ಸಂಸತ್ತಾದ ಅನುಭವ ಮಂಟಪವು ಈಗಿರುವ ಪೀರ್ ಪಾಷಾ ಬಂಗ್ಲೆ ಆಗಿದೆ. ಇದನ್ನು ಭಾರತೀಯ ಪುರಾತತ್ವ ಇಲಾಖೆ ತಕ್ಷಣ ರಕ್ಷಿಸಬೇಕು ಎಂದು ಸ್ವಾಮೀಜಿಗಳು ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬಸವಕಲ್ಯಾಣದ ಬಿಜೆಪಿ ಶಾಸಕ ಶರಣು ಸಲಗಾರ ಹಾಗೂ ವೀರಶೈವ – ಲಿಂಗಾಯತ ಸಂಘಟನಾ ವೇದಿಕೆಯ ಅಧ್ಯಕ್ಷ ಪ್ರದೀಪ್ ಕಂಕನವಾಡಿ ಅವರ ನೇತೃತ್ವದಲ್ಲಿ ಸ್ವಾಮೀಜಿಗಳು ಬೊಮ್ಮಾಯಿ ಅವರ ನಿವಾಸದಲ್ಲಿ ಭೇಟಿ ಮಾಡಿ ಈ ಬಗ್ಗೆ ಮನವಿ ಸಲ್ಲಿಸಿದ್ದಾರೆ. ಸ್ಥಳೀಯ ಮೂಲಗಳಿಂದ ತಮಗೆ 2ನೇ ಪುಟಕ್ಕೆ

### ಪ್ರಥಮ ವರ್ಷದ ಪುಣ್ಯಸ್ಮರಣೆ



**ಶರಣ ಹೆಚ್.ಎನ್. ಮುನೇಶ್, ಬಾಡ**
ಪತ್ರಕರ್ತರು
ನಿಧನ: 06.06.2021
(ಸಂಜೆವಾಣಿ, ಹಾಯ್ ಬೆಂಗಳೂರು, ವಿಜಯ ಕರ್ನಾಟಕ, ಸಂಯುಕ್ತ ಕರ್ನಾಟಕ, ಉದಯ ವಾಣಿ, ವಿಶ್ವ ವಾಣಿ, ಈ ಸಂಜೆ ದಿನ ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ )

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನೀವು ಹಾಕಿಕೊಟ್ಟ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ..

ಪತ್ನಿ : ಶ್ರೀಮತಿ ದ್ರಾಕ್ಷಾಯಣಮ್ಮ ಹೆಚ್.ಎನ್ ಮುನೇಶ್
ಪುತ್ರಿ: ಶ್ರೀಮತಿ ಕಾವ್ಯ ಹೆಚ್.ಎಂ. ಶ್ರೀ ಮರುಳಸಿದ್ದೇಶ್ ಜಿ.ವಿ., ಲಿಂಗದಹಳ್ಳಿ
ಪುತ್ರ: ಕಿರಣ್ ಹೆಚ್.ಎಂ. ಸಹೋದರರು: ಶ್ರೀ ಹೆಚ್.ಎನ್.ಬಸವರಾಜ್, ಶ್ರೀ ಹೆಚ್.ಎನ್. ಮಹೇಶ್, ಶ್ರೀ ಹೆಚ್.ಎನ್. ಕಲ್ಲೇಶ್ ಮತ್ತು ಮಕ್ಕಳು ಹಾಗೂ ಹೆಬ್ಬಾಳ್ ವಂಶಸ್ಥರು, ಬಂಧು–ಮಿತ್ರರು, ಬಾಡ.
ಮೊ: 82170 89882, 81053 07880

## ಪರಿಸರ ಪ್ರಯೋಗಾಲಯದಿಂದ ಪರಿಸರ ನಿಯಂತ್ರಣ

### ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಹಿರಿಯ ಪರಿಸರ ಅಧಿಕಾರಿ ಬಿ.ಎಸ್ ಮುರಳೀಧರ


ನಗರಾಭಿವೃದ್ಧಿ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜು ಇವರು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ದಾವಣಗೆರೆ ಕಛೇರಿ ಆವರಣದ ನೂತನ ಪರಿಸರ ಭವನದ ಮುಂಭಾಗ ವಿಶ್ವ ಪರಿಸರ ದಿನದ ಪ್ರಯುಕ್ತ ಗಿಡ ನೆಟ್ಟರು. ಸಂಸದ ಜಿ ಎಂ ಸಿದ್ದೇಶ್ವರ, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಸಿಇಓ ಡಾ.ಚೆನ್ನಪ್ಪ, ಎಸ್.ಪಿ.ರಿಷ್ಯಂತ್ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ, ಸಿಬ್ಬಂದಿಗಳು ಉಪಸ್ಥಿತರಿದ್ದರು.

ದಾವಣಗೆರೆ, ಜೂ.5- ಜಿಲ್ಲೆಯಲ್ಲಿ ಪರಿಸರ ಪ್ರಯೋಗಾಲಯದ ಸುಸಜ್ಜಿತ ಕಟ್ಟಡ ನಿರ್ಮಾಣವಾಗಿದ್ದು, ಇದರಿಂದ ಪರಿಸರ ನಿಯಂತ್ರಣಕ್ಕೆ ಸಹಕಾರಿಯಾಗಲಿದೆ ಎಂದು ಚಿತ್ರದುರ್ಗದ ಕ.ರಾ.ಮಾ.ನಿ.ಮಂ ವಲಯ ಕಚೇರಿಯ ಹಿರಿಯ ಪರಿಸರ ಅಧಿಕಾರಿ ಬಿ.ಎಸ್ ಮುರಳೀಧರ ಹೇಳಿದರು.

ಭಾನುವಾರ ನಗರದ ದೇವರಾಜ್ ಅರಸ್ ಬಡಾವಣೆ ಸಿ ಬ್ಲಾಕ್‌ನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಚೇರಿಯ ಆವರಣದಲ್ಲಿ ಏರ್ಪಡಿಸಲಾಗಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನೀರು ನಮ್ಮ ಜೈವಿಕ ಅಂಶವಾಗಿದ್ದು, ಶುದ್ಧವಾದ ನೀರನ್ನು ಕುಡಿಯುವುದರಿಂದ ಆರೋಗ್ಯವಾಗಿರುತ್ತೇವೆ. ಅಂತೆಯೇ ಗಾಳಿ ಶುದ್ಧವಾದರೆ, ನಮ್ಮ ಆರೋಗ್ಯ ಶುದ್ಧವಾಗಿರುತ್ತದೆ. ಗಿಡಮರಗಳು ಪ್ರಾಣ ವಾಯು ಕೊಡುವುದರಿಂದ ಅವುಗಳನ್ನು ಉಳಿಸಿ, ಬೆಳೆಸುವ ಪ್ರಯತ್ನವನ್ನು ಯುವ ಪೀಳಿಗೆ ಮಾಡಬೇಕು ಎಂದರು.

ಮಧ್ಯ ಕರ್ನಾಟಕದ ಕೇಂದ್ರ ಪರಿಸರ ಪ್ರಯೋಗಾಲಯ-2 ಇದು ದಾವಣಗೆರೆಯಲ್ಲಿ ಸುಸಜ್ಜಿತವಾದ ಕಟ್ಟಡದಿಂದ ನಿರ್ಮಾಣವಾಗಿದೆ. ಇದು ಮಾಲಿನ್ಯ ನಿಯಂತ್ರಣದ ಹೃದಯಭಾಗ ಇದ್ದಂತೆ. ಪರಿಸರ ಕಾರ್ಯಕ್ರಮ 2ನೇ ಪುಟಕ್ಕೆ

### ಬಸ್ ಹಳ್ಳಕ್ಕೆ :25 ಸಾವು

ಉತ್ತರಕಾಶಿ, ಜೂ. 5 – ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯಲ್ಲಿ ಬಸ್ ಒಂದು ಆಳವಾದ ಹಳ್ಳಕ್ಕೆ ಬಿದ್ದು, ಮಧ್ಯ ಪ್ರದೇಶದಿಂದ ಬಂದಿದ್ದ 25 ಯಾತ್ರಿಗಳು ಸಾವನ್ನಪ್ಪಿದ್ದಾರೆ ಹಾಗೂ ಮೂವರು 2ನೇ ಪುಟಕ್ಕೆ

### ಕೈಲಾಸ ಶಿವಗಣಾರಾಧನೆಯ ಆಹ್ವಾನ ಪತ್ರಿಕೆ



॥ ಶ್ರೀ ಭರಮ ದೇವರ ಪ್ರಸನ್ನ ॥
ದಾವಣಗೆರೆ ಜಿಲ್ಲೆ & ತಾ. ಬಿ. ಕಲಪನಹಳ್ಳಿ ಗ್ರಾಮದ ವಾಸಿ
ದೊಡ್ಡಮುದುಕಪ್ಪ ಲಿಂ॥ ಕೆ.ಎಂ. ವಿರುಪಾಕ್ಷಪ್ಪನವರ ಮಕ್ಕಳಾದ
ಡಾ॥ ಎಂ.ವಿ.ನಾಗರಾಜ್ ಮತ್ತು ಡಾ॥ ಎಂ.ವಿ. ಮಂಜುನಾಥ್
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 26.05.2022ನೇ ಗುರುವಾರ ಮಧ್ಯಾಹ್ನ 1.00 ಗಂಟೆಗೆ
ನಮ್ಮ ಪೂಜ್ಯ ತಾಯಿಯವರಾದ
**ಶ್ರೀಮತಿ ಕೆ.ಎಂ. ನಾಗರತ್ನಮ್ಮನವರು**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ : 07.06.2022ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ಶ್ರೀ ಶರಣ ಬಸವೇಶ್ವರ ಕಲ್ಯಾಣ ಮಂಟಪ ಬಿ. ಕಲಪನಹಳ್ಳಿ ಗ್ರಾಮದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು:** ♦ ಶ್ರೀಮತಿ ಲೀಲಾ ಡಾ॥ ಎಂ.ವಿ. ನಾಗರಾಜ್ ಮತ್ತು ಮಕ್ಕಳು,
♦ ಶ್ರೀಮತಿ ಪ್ರೇಮ ಶ್ರೀ ಆರ್.ಜಿ. ಪ್ರಭಾಕರ್ ಮತ್ತು ಮಕ್ಕಳು, ರಾಂಪುರ
♦ ಶ್ರೀಮತಿ ಮಂಜುಳಾ ಶ್ರೀ ಎ.ಎಂ.ರುದ್ರಮುನಿ ವಕೀಲರು, ಮತ್ತು ಮಕ್ಕಳು, ಚಿತ್ರದುರ್ಗ
♦ ಶ್ರೀಮತಿ ಉಮಾ ಚೂರಿ ಲಿಂ॥ ಸಿದ್ದೇಶ್ವರ ಚೂರಿ ಮತ್ತು ಮಕ್ಕಳು, ಹಾವೇರಿ
♦ ಶ್ರೀಮತಿ ಸುಮ ಡಾ॥ ಎಂ.ವಿ. ಮಂಜುನಾಥ ಮತ್ತು ಮಗ
♦ ಮುದುಕಪ್ಪ ವಂಶಸ್ಥರು, ಬಿ.ಕಲಪನಹಳ್ಳಿ ಮತ್ತು ಗೌಡ್ರ ವಂಶಸ್ಥರು,
ರಾಂಪುರ, ಬಿ. ಕಲಪನಹಳ್ಳಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಮೊ: 91481 51579, 94490 63372

# ಹೊನ್ನಾಳಿಯಲ್ಲಿ ಮಾರಿಕಾಂಬ ಜಾತ್ರಾ ಮಹೋತ್ಸವ





ಹೊನ್ನಾಳಿ, ಜೂ. 5 - ಮಾರಿಕಾಂಬ ಜಾತ್ರೆಯನ್ನು ಜುಲೈ 12 ರಿಂದ 14ರವರೆಗೆ 3 ದಿನಗಳ ಕಾಲ ವ್ಯವಸ್ಥಿತವಾಗಿ ನಡೆಸಲು ಸಮಿತಿ ತಿರ್ಮಾನಿಸಿ ಎಂದು ಮಾರಿಕಾಂಬ ದೇವಿ ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ಹೆಚ್. ಬಿ.ಶಿವಯೋಗಿ ಹೇಳಿದರು.

ಶುಕ್ರವಾರ ಪಟ್ಟಣದ ಮಾರಿಕಾಂಬ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವ ಸಮಿತಿ ಪದಾಧಿಕಾರಿಗಳ ಪೂರ್ವಭಾವಿ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಸಮಿತಿ ಗೌರವಧ್ಯಕ್ಷ ಮಾತನಾಡಿ, ಐದು ವರ್ಷಗಳಿಗೊಮ್ಮೆ ಆಷಾಢ ಮಾಸದಲ್ಲಿ ನಡೆಯುವ ಜಾತ್ರೆಯನ್ನು ನಗರದ ನಾಗರಿಕರು, ಸಮಿತಿ ಪದಾಧಿಕಾರಿಗಳು, ಶ್ರೀದೇವಿಯ ಸಕಲ ಭಕ್ತಾದಿಗಳು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಜುಲೈ 12 ರಂದು ಶ್ರೀ ಮಾರಿಕಾಂಬ ದೇವಿ ಮೆರವಣಿಗೆಯು ಕುಂಬಾರ ಬೀದಿಯ ಶ್ರೀ ದುರ್ಗಾಂಬಿಕ ದೇವಸ್ಥಾನದಿಂದ ಮೆರವಣಿಗೆ ಮೂಲಕ ಸಂಚರಿಸಿ ಶ್ರೀ ಹಳದಮ್ಮ ದೇವಾಲಯದ ಹಿಂಭಾಗದಲ್ಲಿ ಶ್ರೀ ದೇವಿ ಗದ್ದಿಗೆಗೊಳ್ಳುವುದು. ಮಹಾಮಂಗಳಾರಾತಿ ನಂತರ ಹುಲುಸಿನ ಜೋಳ ಹಾಕುವುದು.

ಜುಲೈ 13 ರ ಬುಧವಾರ ಸಂಜೆ 5 ಗಂಟೆಗೆ ಗಾವುಮರಿ ತರುವುದು, ಅಸಾದಿ ಹೊಗಳಿಕೆ ಕಾರ್ಯ ನೆರವೇರಲಿದೆ. ಜುಲೈ 14ರ ಗುರುವಾರ ಮಧ್ಯಾಹ್ನ ಶ್ರೀದೇವಿಯನ್ನು ಕೂರಿಸಿ ಭವ್ಯ ಮೆರವಣಿಗೆ ನಡೆಸಲಾಗುವುದು.

ಸಮಿತಿ ಗೌರವಾಧ್ಯಕ್ಷ ಹೆಚ್.ಎ. ಉಮಾಪತಿ ಮಾತನಾಡಿ ವಿವಿದ ಸಮಿತಿಗಳಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಜುಲೈ 11 ರಂದು ಸೋಮವಾರ ಸಂಜೆ 7 ಗಂಟೆಗೆ ರಸಮಂಜರಿ ಕಾರ್ಯಕ್ರಮ ಹಮ್ಮಿಕ್ಕೊಳ್ಳಲಾಗಿದೆ ಎಂದರು.

ಸಭೆಯಲ್ಲಿ ಜಾತ್ರಾ ಮಹೋತ್ಸವ ಸಮಿತಿ ಗೌರವಾಧ್ಯಕ್ಷರಾದ ಹೆಚ್.ಬಿ.ಗಿಡ್ಡಪ್ಪ, ಹೆಚ್.ಎ.ರಾಜಪ್ಪ, ಹೆಚ್.ಎ. ಉಮಾಪತಿ, ಬಿ.ಸಿದ್ದಪ್ಪ, ಉತ್ಸವ ಸಮಿತಿ ಅಧ್ಯಕ್ಷ ಹೆಚ್. ಡಿ.ವಿಜೇಂದ್ರಪ್ಪ, ಕಾರ್ಯದರ್ಶಿ ಮಾಲಿಗೌಡ್ರು, ಉಪಾಧ್ಯಕ್ಷ ಬಣ್ಣಪ್ಪಾರ ಮಹೇಶ್ವರಪ್ಪ, ಹೋಬಳಿದಾರ ರೇವಣಪ್ಪ, ಮುಖಂಡರಾದ ಕಾಯಿಬುರಡೆ ಕೃಷ್ಣಮೂರ್ತಿ, ತೆಂಗಿನಮರದ ಮಾದಪ್ಪ, ಪಾಲಾಕ್ಷಪ್ಪ, ಬುದ್ದಿವಂತರ ರಮೇಶ್, ತಮ್ಮಣ್ಣ, ಗಾಳಿ ನಾಗರಾಜ, ಪುಟ್ಟಪ್ಪ, ಶಿವಶಂಕರಪ್ಪ ಇದ್ದರು.

# ಸಂಗೀತವೆನ್ನುವುದು ಸಾಗರವಿದ್ದಂತೆ



ಹರಪನಹಳ್ಳಿ, ಜೂ. 4- ಸಂಗೀತವೆನ್ನುವುದು ಸಾಗರವಿದ್ದಂತೆ. ಅದರಲ್ಲಿ ನಾವು ಆಳಕ್ಕೆ ಇಳಿದು ಕಲಿತಾಗ ಮಾತ್ರ ನಮಗೆ ಸಂಗೀತ ಗಂಧರ್ವ ಅರ್ಥವಾಗುತ್ತದೆ ಎಂದು ಸಂಗೀತ ಶಿಕ್ಷಕ ಷಣ್ಮುಖಪ್ಪ ಹೇಳಿದರು.

ತಾಲ್ಲೂಕಿನ ನಂದಿಬೇವೂರು ಗ್ರಾಮದಲ್ಲಿ ಪುಟ್ಟರಾಜ ಗವಾಯಿಗಳ ಸಂಗೀತ ಪಾಠಶಾಲೆಯ ಕಲಾವಿದರು ಆಯೋಜಿಸಿದ್ದ ಸರ್ಕಾರಿ ಶಾಲೆಯ ಮಕ್ಕಳಿಗೆ ಉಚಿತ ಸಂಗೀತ ಪಾಠ ತರಬೇತಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಪತ್ರಕರ್ತ ಪಿ. ಕರಿಬಸಪ್ಪ ಮಾತನಾಡಿ, ಮನುಷ್ಯನ ರೋಗಗಳನ್ನು ತಡೆಗಟ್ಟುವ ಶಕ್ತಿ ಸಂಗೀತಕ್ಕೆ ಇದೆ, ತನ್ನದೇ ಆದ ಮಾಂತ್ರಿಕತೆಯನ್ನು ಹೊಂದಿದೆ ಎಂದರು.

ಸಂಗೀತ, ನಾಟಕ, ಕಲೆ, ಸಾಹಿತ್ಯವು ನಶಿಸಿ ಹೋಗುತ್ತಿದ್ದು, ಇದನ್ನು ನಮ್ಮ ಮುಂದಿನ ಪೀಳಿಗೆಯತ್ತ ಕೊಂಡೊಯ್ಯಲು ಸರ್ಕಾರ ಪ್ರೋತ್ಸಾಹ ನೀಡಬೇಕು ಹಾಗೂ ಪೋಷಕರು ಸಹ ತಮ್ಮ ಮಕ್ಕಳಿಗೆ ತಮ್ಮದೇ ಆದ ಜಾನಪದ, ಸಾಹಿತ್ಯ, ಸಂಗೀತ, ನಾಟಕದಂತಹ ಕಲೆಯ ಪ್ರತಿಭೆಯನ್ನು ಕಲಿಸಿಕೊಡಬೇಕು ಎಂದರು.

**ಹರಪನಹಳ್ಳಿ**

ಪಾರಂಪರಿಕ ವೈದ್ಯ ಸಿ.ಎಂ. ಪಂಚಾಕ್ಷರಯ್ಯ, ಕಲಾವಿದ ಕರಿಬಸಪ್ಪ, ಮುಖ್ಯ ಶಿಕ್ಷಕ ಕೊಟ್ರೇಶಪ್ಪ, ಕೂಲಹಳ್ಳಿ ಚಂದ್ರಪ್ಪ, ದಾನಪ್ಪ ಮಾತನಾಡಿದರು.

ಈ ಸಂದರ್ಭದಲ್ಲಿ ಅಂಗಡಿ ಚನ್ನಬಸಪ್ಪ, ಶೇಖ್ ಬುಡೇನ್ ಸಾಬ್, ಕುಂಬಾರ ತ್ರೈಮೂರ್ತಿ, ಹಂಚಿನಾಳ ಅಶೋಕ, ಮೋರಿಗೇರಿ ಮುದಿಮಲ್ಲಪ್ಪ, ದ್ಯಾಮಪ್ಪ, ನಿ. ಶಿಕ್ಷಕ ಕೊಟ್ರಬಸಪ್ಪ, ರಾಧ, ಚಿಗಟೇರಿ ಗುಂಡಪ್ಪ, ಗುರುಬಸಪ್ಪ, ಬಸವರಾಜಯ್ಯ ಸೇರಿದಂತೆ ಇತರರಿದ್ದರು.

## ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಶಾಲೆ ಪ್ರವೇಶ ಅವಧಿ ವಿಸ್ತರಣೆ

ದಾವಣಗೆರೆ, ಜೂ.5- ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಜಿಲ್ಲಾ ವ್ಯಾಪ್ತಿಯ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳನ್ನು ಪ್ರತಿಷ್ಠಿತ ಶಾಲೆಗಳಿಗೆ ಪ್ರವೇಶ ನೀಡಲು ಅರ್ಜಿಯನ್ನು ಆಹ್ವಾನಿಸಿದ್ದು, ವಿದ್ಯಾರ್ಥಿಗಳು 5ನೇ ತರಗತಿಯಲ್ಲಿ ಶೇ. 60ಕ್ಕಿಂತ ಹೆಚ್ಚು ಅಂಕ ಪಡೆದು ಉತ್ತೀರ್ಣರಾಗಿರಬೇಕು.

ಅರ್ಹ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಅರ್ಜಿಯನ್ನು ಆಯಾ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯಿಂದ ಪಡೆದು ಅರ್ಜಿಗಳನ್ನು ಭರ್ತಿ ಮಾಡಿ, ಆಯಾ ತಾಲ್ಲೂಕಿನಲ್ಲಿಯೇ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಇದೇ ದಿನಾಂಕ 7 ರವರೆಗೆ ಮುಂದೂಡಲಾಗಿರುತ್ತದೆ. ಜೂ.13 ರಂದು ಡಯಟ್ ಮೂಲಕ ಅರ್ಹತೆ ಪರೀಕ್ಷೆ ನಡೆಯುವ ದಿನವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ದಾವಣಗೆರೆ ಸಂಪರ್ಕಿಸಬಹುದೆಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಿಐಇಆರ್‌ಟಿ ಹುದ್ದೆಗೆ ವಿಶೇಷ ಚೇತನ ಅಭ್ಯರ್ಥಿಗಳಿಂದ ಅರ್ಜಿ

ದಾವಣಗೆರೆ, ಜೂ.5- ಜಿಲ್ಲಾ ವ್ಯಾಪ್ತಿಯ ಆರು ತಾಲ್ಲೂಕುಗಳಲ್ಲಿ ಖಾಲಿ ಇರುವ ಬಿ.ಐ.ಇ.ಆರ್.ಟಿ (ಪ್ರಾಥಮಿಕ) ಮತ್ತು ಬಿ.ಐ.ಇ.ಆರ್.ಟಿ (ಪ್ರೌಢ) ಹುದ್ದೆಗಳಿಗೆ ವಿಶೇಷ ಚೇತನ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ಆರ್.ಸಿ.ಐ ನಿಯಮದಂತೆ ವಿಶೇಷ ಡಿ.ಇಡಿ ಮತ್ತು ವಿಶೇಷ ಬಿ.ಇಡಿ ಪದವಿಯ ವಿದ್ಯಾರ್ಹತೆ ಹೊಂದಿರುವವರನ್ನು 2022-23ನೇ ಸಾಲಿಗೆ ನೇರಗುತ್ತಿಗೆ ಮೂಲಕ ತಾತ್ಕಾಲಿಕ ಆಯ್ಕೆ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಸ್ವವಿವರವುಳ್ಳ ಮಾಹಿತಿಯನ್ನು ನಾಡಿದ್ದು ದಿನಾಂಕ 6ರೊಳಗೆ ಅಂಚೆ ಅಥವಾ ಮುದ್ದಾಂ, ಸಾರ್ವಜನಿಕ ಶಿಕ್ಷಣ ಇಲಾಖೆ, ಅಂಬೇಡ್ಕರ್ ವೃತ್ತ ದಾವಣಗೆರೆ-577002 ಇಲ್ಲಿಗೆ ತಲುಪಿಸಬೇಕು. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-296445, ಮೊ.ಸಂ:9448999394.

## ಸಸಿ ನೆಟ್ಟು ಪರಿಸರ ಉಳಿಸಿ; ದಿನೇಶ್ ಶೆಟ್ಟಿ



ದಾವಣಗೆರೆ, ಜೂ.5- ದಿನೇಶ್ ಕೆ. ಶೆಟ್ಟಿ ಅಭಿಮಾನಿ ಬಳಗದ ವತಿಯಿಂದ ಪಿ.ಜೆ. ಬಡಾವಣೆಯ ರೈತರ ಬೀದಿಯ ಕಾರ್ನರ್‌ನಲ್ಲಿ ಇಂದು ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರು ಸಸಿ ನೆಡುವುದರ ಮುಖಾಂತರ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿ, ಸಸಿ ನೆಟ್ಟು ಪರಿಸರ ಉಳಿಸಿ ಎಂದು ಯುವಕರಿಗೆ ಕರೆ ನೀಡಿದರು

ಪಾಲಿಕೆ ಸದಸ್ಯ ಎ. ನಾಗರಾಜ್, ಪರಿಸರ ಪ್ರೇಮಿ ಶಿವಕುಮಾರ್, ವೆಂಕಟೇಶ್ವರ ವೈನ್ಸ್ ಮಾಲೀಕ ಶ್ರೀಕಾಂತ್ ಪರಶರಾಮ್ ಸಾಳುಂಕೆ, ಕಾಫಿ ಡೇ ಮಾಲೀಕ ಮಂಜುನಾಥ್, ಸಿದ್ದೇಶ್ ಸುರ್ವೆ ರೈತರು ಬೀದಿಯ ಶರತ್ ಕುಮಾರ್, ಪ್ರದೀಪ್ ಕನ್ನವರ್, ಗೋಪಾಲ್ (ಅಂತು) ಮತ್ತಿತರರಿದ್ದರು.

# ಪರಿಸರ ಪ್ರಯೋಗಾಲಯದಿಂದ ಪರಿಸರ ನಿಯಂತ್ರಣ



**1ನೇ ಪುಟದಿಂದ** ನಿರಂತರವಾಗಿ ನಡೆದು, ಪರಿಸರ ಸಂರಕ್ಷಣೆಯಲ್ಲಿ ಮಕ್ಕಳು ಜೊತೆಗೆ ನಾಗರಿಕರೆಲ್ಲರೂ ಕೈ ಜೋಡಿಸಿ, ಪರಿಸರ ಸಂರಕ್ಷಣೆ ಮಾಡುವ ಕೆಲಸ ಮಾಡಬೇಕು ಎಂದರು.

ನಿವೃತ್ತ ಪ್ರಾಂಶುಪಾಲ ಮಂಜಪ್ಪ ಮಾತನಾಡಿ, ಜೂನ್ 5ರಂದು ವಿಶ್ವ ಪರಿಸರ ದಿನಾಚರಣೆಯನ್ನು ನಾವೆಲ್ಲರೂ ಆಚರಿಸುತ್ತೇವೆ. ಅದರೊಟ್ಟಿಗೆ ಪರಿಸರ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು. ಪರಿಸರ ಉಳಿಸುವ ಕೆಲಸ ಬರೀ ಮಾತಾಗದೆ ಕಾರ್ಯರೂಪದಲ್ಲಿ ಬರಬೇಕು, ಪ್ರತಿಯೊಬ್ಬರೂ ಒಂದೊಂದು ಗಿಡ ನೆಡಬೇಕು ಎಂದು ವಿದ್ಯಾರ್ಥಿಗಳಿಗೆ ಹೇಳಿದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಿಲ್ಲೆಯಲ್ಲಿ ನಾಲ್ಕೈದು ವರ್ಷಗಳಿಂದ ಹಲವು ಕಾರ್ಖಾನೆಗಳಿಂದ ಕಲುಷಿತಗೊಂಡು ಬರುವ ನೀರನ್ನು ಶುದ್ಧೀಕರಿಸಿ, ಕೃಷಿ ಹಾಗೂ ಇನ್ನಿತರೆ ಚಟುವಟಿಕೆಗಳಿಗೆ ಉಪಯೋಗಿಸಲು ಕ್ರಮ ಕೈಗೊಂಡಿದೆ ಎಂದರು.

ಜಿಲ್ಲಾ ಪ್ರಾದೇಶಿಕ ಕಚೇರಿಯ ಪರಿಸರ ಅಧಿಕಾರಿ ಈ. ಪ್ರಕಾಶ್ ಪ್ರಾಸ್ತಾವಿಕವಾಗಿ ಮಾತನಾಡಿ, ಪರಿಸರ ಮಾಲಿನ್ಯದ ಮೂಲ ಮಾನವರೇ ಆಗಿದ್ದು, ಅದನ್ನು ಸರಿಪಡಿಸುವುದು ಎಲ್ಲರ ಕರ್ತವ್ಯವಾಗಿದೆ. ನಾವುಗಳು ಪರಿಸರ ಸ್ನೇಹಿ ಜೀವನವನ್ನು ನಡೆಸಬೇಕಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪರಿಸರವಾದಿ ಡಾ॥. ಎಚ್.ಕೆ. ಎಸ್ ಸ್ವಾಮಿ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳಿಗೆ ನಾವು ಪ್ರತಿನಿತ್ಯ ಬಳಸಿ ಬಿಸಾಡಿರುವ ಕಚ್ಚಾವಸ್ತುಗಳು ಪರಿಸರಕ್ಕೆ ಮಾರಕ. ನಾವು ಬಿಸಾಡಿರುವ ವಸ್ತುಗಳನ್ನು ಸಂಗ್ರಹಿಸಿ ಅವುಗಳಿಂದ ತಯಾರಿಸಿದ ಅನೇಕ ಪರಿಸರ ಸ್ನೇಹಿ ವಸ್ತುಗಳನ್ನು ಮಕ್ಕಳಿಗೆ ತೋರಿಸಿ ಜಾಗೃತಿ ಮೂಡಿಸಿದರು.

ಇದೇ ಕಾರ್ಯಕ್ರಮದಲ್ಲಿ ಮಂಡಳಿಯ ನಿವೃತ್ತ ಅಧಿಕಾರಿ ಗೊಣ್ಣೆ ಹಾಗೂ ಇಲಾಖೆಯ ವಿವಿಧ ಅಧಿಕಾರಿಗಳು ಸಿಬ್ಬಂದಿ ವರ್ಗದವರು ಮತ್ತು ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಜರಿದ್ದರು.

ಕಾರ್ಯಕ್ರಮಕ್ಕೂ ಮುನ್ನ ಕೇಂದ್ರ ಕಚೇರಿಯಿಂದ ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ ಸಚಿವರ ಕಾರ್ಯಕ್ರಮದ ನೇರ ವೀಕ್ಷಣೆಗೆ ಎಲ್ಲಾ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಲಾಗಿತ್ತು.

## ಲಕ್ಷ್ಮೀಪುರ ಗ್ರಾ.ಪಂ.ಅಧ್ಯಕ್ಷರಾಗಿ ರೇಣುಕಾ ರಮೇಶ್ ಆಯ್ಕೆ



ಹರಪನಹಳ್ಳಿ, ಜೂ. 5- ತಾಲ್ಲೂಕಿನ ಲಕ್ಷ್ಮೀಪುರ ಗ್ರಾಮ ಪಂಚಾಯಿತಿಗೆ ಅಧ್ಯಕ್ಷರಾದ ಹನುಮಕ್ಕ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಟಿ. ಕೆ.ರೇಣುಕಮ್ಮ ರಮೇಶ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತೆಂದು ಚುನಾವಣಾಧಿಕಾರಿ ತಹಶೀಲ್ದಾರ್ ಶಿವಕುಮಾರ್ ಬಿರಾದಾರ್ ಘೋಷಣೆ ಮಾಡಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾದ ಎ.ಎನ್. ಕುಮಾರ್,ಕಾಂಗ್ರೆಸ್ ಮುಖಂಡರಾದ ಪಿ.ಟಿ. ಭರತ್, ಸುರೇಶ್, ನಾಗಪ್ಪ, ಯಮುನಾ ನಾಯ್ಕ್, ಜಿ. ನಾಗಪ್ಪ, ಶಾರದಮ್ಮ, ಪಿಡಿಓ ಉಮೇಶ್ ಆಯ್ಕೆಯಾದ ಅಧ್ಯಕ್ಷರನ್ನು ಸನ್ಮಾನಿಸಿದರು.

## ಪ್ರತಿಯೊಬ್ಬರೂ ಪರಿಸರ ರಕ್ಷಣೆಗೆ ಮುಂದಾಗಬೇಕು : ಎ.ನಾಗರಾಜ್



ದಾವಣಗೆರೆ, ಜೂ.5 - ಪ್ರತಿಯೊಬ್ಬರೂ ಕೂಡಾ ಪರಿಸರ ರಕ್ಷಣೆಗೆ ಮುಂದಾಗಬೇಕು. ಗಿಡ ಮರಗಳನ್ನು ಬೆಳೆಸಿ ಪೋಷಿಸಬೇಕು ಎಂದು ಮಹಾನಗರ ಪಾಲಿಕೆ ಮಾಜಿ ವಿಪಕ್ಷ ನಾಯಕ, ವಾರ್ಡ್ ಸದಸ್ಯ ಎ. ನಾಗರಾಜ್ ಕರೆ ನೀಡಿದರು.

ಇಲ್ಲಿನ ವಿನೋಬನಗರದ 3ನೇ ಮೇನ್‌ನಲ್ಲಿರುವ ಪಾರ್ಕ್‌ನಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬರು ಬರುತ್ತಾ ಬಿಸಿಲಿನ ತಾಪ ಹೆಚ್ಚಾಗುತ್ತಿದೆ. ನಮಗೆ ಶುದ್ಧವಾದ ಗಾಳಿಯ ಕೊರತೆ ಬಹಳ ಇದೆ. ಆದ್ದರಿಂದ ಪ್ರತಿಯೊಬ್ಬರೂ ಕೂಡಾ ತಮ್ಮ ಮನೆ, ಕಚೇರಿ, ಶಾಲೆಗಳಲ್ಲಿ ಗಿಡ, ಮರಗಳನ್ನು ಬೆಳೆಸಿ, ಪೋಷಿಸಬೇಕು ಎಂದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಮಾಜಿ ಸದಸ್ಯ ದಿನೇಶ ಕೆ. ಶೆಟ್ಟಿ, ವಾರ್ಡ್‌ನ ಎಸ್.ರವಿ, ಶಿವಾಜಿರಾವ್, ಯಶವಂತ್, ಯೋಗೀಶ, ರಾಮಚಂದ್ರ ರಾಯ್ಕರ್, ಚನ್ನಬಸವ ಶೀಲವಂತ್, ಮಂಜುನಾಥ ಅಣ್ವೇಕರ್, ಸುರೇಶ, ಪರಮೇಶ್ವರಪ್ಪ, ಮಮತಾ, ಚಂದನ್, ಟೋಪಣ್ಣ ಇತರರು ಇದ್ದರು.

# 'ಸೇವಾ ಕರ್ತ'ರಾದರೆ ಸಮಸ್ಯೆಗಳು ಪರಿಹಾರ

**1ನೇ ಪುಟದಿಂದ** ವರದಿಗೆ ಮುಂಚೆ ಸಂಪೂರ್ಣ ಪರಿಶೀಲನೆ ನಡೆಸಬೇಕು ಎಂದು ಕಿವಿಮಾತು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಕೊರೊನಾ ಸಂದರ್ಭದಲ್ಲಿ 55 ಪತ್ರಕರ್ತರು ನಿಧನರಾಗಿದ್ದಾರೆ. ಇವರಿಗೆ ತಲಾ 5 ಲಕ್ಷ ರೂ. ಪರಿಹಾರ ಕೊಡಿಸಲು ಸಂಘ ಶ್ರಮಿಸಿದೆ. ಅದೇ ರೀತಿ ಆಸ್ಪತ್ರೆಗೆ ದಾಖಲಾದವರಿಗೆ 1 ರಿಂದ ಐದು ಲಕ್ಷ ರೂ.ಗಳವರೆಗೆ ಪರಿಹಾರ ಕಲ್ಪಿಸಿದೆ ಎಂದು ತಿಳಿಸಿದರು.

ಸಾಮಾಜಿಕ ಮಾಧ್ಯಮಗಳಲ್ಲಿ ಹರಡುವ ಸುಳ್ಳುಗಳ ವೇಗ ಹೆಚ್ಚಾಗಿರುತ್ತದೆ. ಪತ್ರಿಕೆಗಳ ಮೂಲಕ ಸತ್ಯ ಹೊರಗೆ ಹೆಜ್ಜೆ ಇಡುವ ವೇಳೆಗೆ ಸಾಮಾಜಿಕ ಮಾಧ್ಯಮಗಳ ಸುಳ್ಳು ಊರು ತುಂಬ ಹರಡಿರುತ್ತದೆ. ಈ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಪತ್ರಿಕೆಗಳು ಕಾರ್ಯ ನಿರ್ವಹಿಸಬೇಕಿದೆ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್ ಅವರು ನೂತನ ಪದಾಧಿಕಾರಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

'ಜನತಾವಾಣಿ' ಸಂಪಾದಕ ಎಂ.ಎಸ್. ವಿಕಾಸ್, ಸಂಘದ ನೂತನ ಅಧ್ಯಕ್ಷ ಇ.ಎಂ. ಮಂಜುನಾಥ, ಖಜಾಂಚಿ ಎನ್.ವಿ. ಬದರಿನಾಥ್, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ, ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್, ಕಾರ್ಯಕ್ರಮದ ಸ್ವಾಗತ ಸಮಿತಿ ಅಧ್ಯಕ್ಷ ಆರ್. ರವಿ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀ ವೀರೇಶ್ವರ ಪುಣ್ಯಾಶ್ರಮದ ವಿದ್ಯಾರ್ಥಿಗಳು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಅಜಯ್ ನಾರಾಯಣ ಪ್ರಾರ್ಥಿಸಿದರು. ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್ ಸ್ವಾಗತಿಸಿದರು. ಸಿನಿಮಾ ಸಿರಿ ಅಧ್ಯಕ್ಷ ಸುರಭಿ ಶಿವಮೂರ್ತಿ ನಿರೂಪಿಸಿದರು.

## ಕಾರ್ಯನಿರತ ಪತ್ರಕರ್ತರ ಸಂಘದಿಂದ ಸನ್ಮಾನ

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪದಾಧಿಕಾರಿಗಳ ಸೇವಾ ಸ್ವೀಕಾರ ಸಮಾರಂಭದಲ್ಲಿ ಯು.ಪಿ. ಎಸ್.ಸಿ. ಪರೀಕ್ಷೆಯಲ್ಲಿ ರಾಜ್ಯದಲ್ಲೇ ಪ್ರಥಮ ಸ್ಥಾನ ಪಡೆದಿರುವ ಅವಿನಾಶ್ ರಾವ್ ಅವರನ್ನು ಸನ್ಮಾನಿಸಲಾಯಿತು.


ಇದೇ ಸಂದರ್ಭದಲ್ಲಿ ಹಿರಿಯ ಪತ್ರಕರ್ತರುಗಳಾದ ಹೆಚ್.ಬಿ. ಮಂಜುನಾಥ್, ಬಂಕಾಪುರದ ಚನ್ನಬಸಪ್ಪ, ಎಸ್. ಬಿ. ಜಿನದತ್, ಸಾಂ.ಶಿ. ಉಮಾಶಂಕರ್, ಪೆ.ನಾ. ಗೋಪಾಲರಾವ್, ಬಕ್ಕೇಶ್ ನಾಗನೂರು, ಬಸವರಾಜ ಐರಣಿ, ನೀಲಕಂಠರಾವ್ ಪವಾರ್, ಬಾಬು ದಾಮೋದರ್, ಹರಿಹರದ ಅಜೀಜ್ ಉರ್ ರೆಹಮಾನ್, ಜಿ.ಕೆ. ಶಂಕರಪ್ಪ, ಚನ್ನಗಿರಿಯ ಬಾ.ರಾ. ಮಹೇಶ್, ಸಂಘದ ತಾಲ್ಲೂಕು ಅಧ್ಯಕ್ಷರುಗಳಾದ ಜಗಳೂರಿನ ಚಿದಾನಂದ್, ಹರಿಹರದ ಡಾ. ವಾಸುದೇವ್, ಹೊನ್ನಾಳಿಯ ಮೃತ್ಯುಂಜಯ ಪಾಟೀಲ್, ಚನ್ನಗಿರಿಯ ಸತೀಶ್, ಪತ್ರಕರ್ತರ ಸಂಘದ ರಾಷ್ಟ್ರೀಯ ಮಂಡಳಿ ಸದಸ್ಯ ಕೊಟ್ರೇಶ್ ಅಣಬೂರು ಮಠ ಅವರುಗಳನ್ನು ಸನ್ಮಾನಿಸಲಾಯಿತು.

## ಪೀರ್ ಪಾಷಾ ಬಂಗ್ಲೆ ಬಸವ ಕಲ್ಯಾಣವಾಗಿತ್ತು

**1ನೇ ಪುಟದಿಂದ** ತಿಳಿದಿರುವ ಪ್ರಕಾರ ಹಾಗೂ ದಾಖಲೆಗಳ ಪ್ರಕಾರ, ಪೀರ್ ಪಾಷಾ ಬಂಗ್ಲೆಯು ಮೂಲತಃ ಅನುಭವ ಮಂಟಪ ಎಂದು ತಿಳಿಸಿದ್ದಾರೆ.

ಬಸವೇಶ್ವರರ ಕುರಿತ ಸ್ಥಳಗಳನ್ನು ರಕ್ಷಿಸಲು 500 ಕೋಟಿ ರೂ. ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಬೇಕು ಎಂದೂ ಶ್ರೀಗಳು ಒತ್ತಾಯಿಸಿದ್ದಾರೆ.

## ಹಳೆಪೇಟೆ ಹಿರೇಮಠದ ಹೆಚ್.ಎಸ್. ಸ್ವಾಮಿ ವಿರಜಾನಂದ ಲಿಂಗೈಕ್ಯ



ದಾವಣಗೆರೆ ಹಳೆಪೇಟೆ ಹಿರೇಮಠದ ವಾಸಿ

ಲಿಂ. ವೇ. ಶಿವಾನಂದಸ್ವಾಮಿ ಶಾಸ್ತ್ರಿಗಳ ಪುತ್ರ

**ಹೆಚ್.ಎಸ್. ಸ್ವಾಮಿ ವಿರಜಾನಂದ**

ಅವರು ದಿನಾಂಕ : 05.06.2022ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 77 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯಂದಿರು, ಸೊಸೆಯಂದಿರು, ಸಹೋದರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 05.06.2022ರ ಭಾನುವಾರ ಸಂಜೆ 5.30ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ಇಂತಿ ದುಃಖತಪ್ತರು

**ಶ್ರೀಮತಿ ಶೋಭಾ ಹೆಚ್.ವಿ ಮತ್ತು ಮಕ್ಕಳು, ಸಹೋದರರು ಹಾಗೂ ಹಿರೇಮಠದ ವಂಶಸ್ಥರು, ಮೊ: 98862 42527**

## ಮಾಂಟೆಸೊರಿ ಶಾಲೆಯಲ್ಲಿ ತಾಲ್ಲೂಕು ಕಸಾಪ ದತ್ತಿ ಉಪನ್ಯಾಸ



ದಾವಣಗೆರೆ, ಜೂ.5- ಮಾಂಟೆಸೊರಿ ಶಾಲೆಯಲ್ಲಿ ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ನಡೆದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಚಾರ್ಯರಾದ ಶ್ರೀಮತಿ ಸುಜಾತ ಗಣೇಶ್ ಅವರು 'ಶಿಕ್ಷಣದಲ್ಲಿ ನೈತಿಕತೆ ಮತ್ತು ಸಮನ್ವಯತೆ' ವಿಷಯ ಕುರಿತು ದತ್ತಿ ಉಪನ್ಯಾಸ ನೀಡಿದರು. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ನೀತಿ ಶಿಕ್ಷಣ ಅತ್ಯಗತ್ಯವೆಂಬುದನ್ನು ಕಥೆಗಳನ್ನು ಉದಾಹರಿಸಿ ವಿವರಿಸಿದರು.

ಮಾಂಟೆಸೊರಿ ಶಾಲೆಯ ಶೈಕ್ಷಣಿಕ ಸಲಹೆಗಾರ ಅಮಿತ್ ಅಧ್ಯಕ್ಷತೆ ವಹಿಸಿ, ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ಎದುರಿಸಿದ ವರ್ಣಭೇದ ಹಾಗೂ ಅಲ್ಲಿನ ಭಾರತೀಯರಿಗೆ ನ್ಯಾಯ ದೊರಕಿಸಲು ಅವರು ಮಾಡಿದ ಹೋರಾಟ ಇಂದಿನ ಮಕ್ಕಳಿಗೆ ಆದರ್ಶವಾಗಬೇಕು ಎಂದು ತಿಳಿಸಿದರು.

ಶ್ರೀಮತಿ ಮಲ್ಲಮ್ಮ ನಾಗರಾಜ್ ಸಮಾರಂಭವನ್ನು ಉದ್ಘಾಟಿಸಿದರು. ಶ್ರೀಮತಿ ಪರಿಮಳ ಜಗದೀಶ್ ಪ್ರಾಸ್ತಾವಿಕ ನುಡಿಯಲ್ಲಿ ಸಾಹಿತ್ಯ ಪರಿಷತ್ತಿನ ಇತಿಹಾಸವನ್ನು ವಿವರಿಸಿ, ಕನ್ನಡವನ್ನು ಉಳಿಸಿ, ಬೆಳೆಸಲು ನಾವೆಲ್ಲರೂ ಪ್ರಯತ್ನಿಸಬೇಕಾಗಿದೆ ಎಂದು ತಿಳಿಸಿದರು.

ಎ.ಪಿ. ಷಡಕ್ಷರಪ್ಪ ಅವರು ಕನ್ನಡ ಭಾಷೆಗೆ ಕೊಡಬೇಕಾದ ಪ್ರಾಶಸ್ತ್ಯವನ್ನು ವಿವರಿಸಿ, ಅತಿಥಿಗಳಿಗೆ ಗೌರವ ಸಮರ್ಪಣೆ ಮಾಡಿದರು. ಸಭೆಯಲ್ಲಿ ಶ್ರೀಮತಿ ವಾಗ್ದೇವಿ ಹಾಗೂ ಪ್ರಜಾವಾಣಿ ಪತ್ರಿಕೆಯ ನಾಗರಾಜ್ ಉಪಸ್ಥಿತರಿದ್ದರು.

ಮುಖ್ಯ ಶಿಕ್ಷಕಿ ಶ್ರೀಮತಿ ಸುಮಂಗಳ ಸರ್ವರನ್ನು ಸ್ವಾಗತಿಸಿದರು. ಮಕ್ಕಳು ವಚನ ಗೀತೆ ಗಾಯನ ಹಾಡಿದರು ಹಾಗೂ ನೃತ್ಯ ನಡೆಸಿಕೊಟ್ಟರು. ಶಿಕ್ಷಕಿ ವೇದ ಕಾರ್ಯಕ್ರಮ ನಿರೂಪಿಸಿದರು.

## ಹರಿಹರದಲ್ಲಿ ಗಾಂಜಾ : ಬಂಧನ

ಹರಿಹರ, ಜೂ. 5- ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಟಿಪ್ಪು ನಗರದಲ್ಲಿ ಗಾಂಜಾ ಮಾರಾಟ ಕೇಂದ್ರದ ಮೇಲೆ ದಾಳಿ ಮಾಡಿ 395 ಗ್ರಾಂ ಗಾಂಜಾ ವಶಪಡಿಸಿಕೊಂಡಿರುವ ಪೊಲೀಸರು, ಮೂವರನ್ನು ಬಂಧಿಸಿದ್ದಾರೆ.

ಒಬ್ಬ ಮಹಿಳೆ ಹಾಗೂ ಇಬ್ಬರನ್ನು ಬಂಧಿಸಲಾಗಿದೆ ಎಂದು ಸಿಪಿಐ ಸತೀಶ್ ಕುಮಾರ್ ತಿಳಿಸಿದ್ದಾರೆ.

## 25 ಸಾವು

**1ನೇ ಪುಟದಿಂದ** ತೀವ್ರವಾಗಿ ಗಾಯಗೊಂಡಿದ್ದಾರೆ.

ರಿಖಾವು ಖಿಡ್ ಎಂಬಲ್ಲಿ ಅಪಘಾತ ಸಂಭವಿಸಿದೆ. ಯಾತ್ರಿಗಳು ಮಧ್ಯ ಪ್ರದೇಶದ ಪನ್ನಾ ಜಿಲ್ಲೆಯವರು. ಅವರು ಯಮುನೋತ್ರಿಗೆ ತೆರಳುತ್ತಿದ್ದರು.

ಇದುವರೆಗೂ 17 ಮೃತ ದೇಹಗಳನ್ನು ಹೊರ ತೆಗೆಯಲಾಗಿದೆ. ಉಳಿದ ಮೃತ ದೇಹಗಳ ಶೋಧ ಮುಂದುವರೆದಿದೆ. ಗಾಯಗೊಂಡಿರುವ ಮೂವರನ್ನು ಡಮ್ಟಾ ಎಂಬಲ್ಲಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

# ಸ್ವಂತ ಹಣದಲ್ಲೇ ನಾಲೆ ದುರಸ್ತಿ ಮಾಡಿಸಿ ರೈತರಿಗೆ ನೆರವಾದ ಚಂದ್ರಶೇಖರ್ ಪೂಜಾರ್



ಮಲೇಬೆನ್ನೂರು, ಜೂ. 5 - ದೇವರ ಬೆಳಕೆರೆ ಪಿಕಪ್ ಡ್ಯಾಂನಿಂದ ಹರಿಯುವ ಸಿದ್ಧವೀರಪ್ಪ ನಾಲೆ ಇತ್ತೀಚೆಗೆ ಸುರಿದ ಭಾರೀ ಮಳೆಯಿಂದಾಗಿ ನೀರಿನ ರಭಸಕ್ಕೆ ಬನ್ನಿಕೋಡು ಬಳಿ ಒಡೆದು ಹೋಗಿತ್ತು. ಇದರಿಂದಾಗಿ ಬನ್ನಿಕೋಡು, ಷಂಶೀಪುರ, ಹನಗವಾಡಿ ಬೆಳ್ಳೂಡಿ ಗ್ರಾಮಗಳ ಸುಮಾರು 5 ಸಾವಿರ ಎಕರೆ ಜಮೀನಿನಲ್ಲಿ ಬೆಳೆಯಲಾಗಿದ್ದ ಭತ್ತದ ಬೆಳೆಗೆ ನೀರಿನ ತೊಂದರೆ ಉಂಟಾಗಿ ರೈತರು ಆತಂಕಕ್ಕೆ ಒಳಗಾಗಿದ್ದರು.

ಭತ್ತ ಕಾಳು ಕಟ್ಟುವ ಹಂತದಲ್ಲಿದ್ದು, ಈಗ ನೀರಿನ ಅವಶ್ಯಕತೆ ತುಂಬಾ ಇದೆ ಎಂದು ಈ ಭಾಗದ ರೈತರು ನೀರಾವರಿ ಇಲಾಖೆ ಇಂಜಿನಿಯರ್ ಸೇರಿದಂತೆ ಎಲ್ಲರ ಬಳಿ ಹೋಗಿ ನಾಲೆ ದುರಸ್ತಿ ಮಾಡಿಸುವಂತೆ ಒತ್ತಾಯಿಸಿದರೂ ಪ್ರಯೋಜನ ಆಗಲಿಲ್ಲ. ತಕ್ಷಣಕ್ಕೆ ಅನುದಾನ ಇಲ್ಲ ಎಂಬ ಉತ್ತರ ಅಧಿಕಾರಿಗಳಿಂದ ಬಂದಾಗ ಕಂಗಾಲದ ರೈತರು ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಅವರನ್ನು ಭೇಟಿ ಮಾಡಿ ಸಮಸ್ಯೆ ವಿವರಿಸಿ ತಕ್ಷಣ ನಾಲೆ ದುರಸ್ತಿ ಮಾಡಿಸುವಂತೆ ಮನವಿ ಮಾಡಿದ್ದರು.

ರೈತರ ಮನವಿಗೆ ಕೂಡಲೇ ಸ್ಪಂದಿಸಿದ ಚಂದ್ರಶೇಖರ್ ಪೂಜಾರ್ ಅವರು, ತಕ್ಷಣ ಸ್ಥಳಕ್ಕೆ ತೆರಳಿ ಕಾಮಗಾರಿಗೆ ಚಾಲನೆ ನೀಡಿದರು.

ಕೇವಲ 4-5 ದಿನಗಳಲ್ಲಿ ಸುಮಾರು 6 ಲಕ್ಷ ರೂ. ವೆಚ್ಚದಲ್ಲಿ ಸಿದ್ದವೀರಪ್ಪ ನಾಲೆ ದುರಸ್ತಿ ಮಾಡಿಸಿ, ಭಾನುವಾರ ರೈತರ ಸಮ್ಮುಖದಲ್ಲಿ ನಾಲೆಗೆ ಪೂಜೆ ಸಲ್ಲಿಸಿ ನೀರು ಹರಿಸಲಾಯಿತು. ಚಂದ್ರಶೇಖರ್ ಪೂಜಾರ್ ಅವರಿಗೆ ರೈತರ ಬಗ್ಗೆ ಇರುವ ಕಾಳಜಿ, ಕಳಕಳಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಕೃತಜ್ಞತೆ ಸಲ್ಲಿಸಿದ ಬನ್ನಿಕೋಡು, ಷಂಶೀಪುರ, ಬೆಳ್ಳೂಡಿ, ಹನಗವಾಡಿ ರೈತರು ಇಚ್ಛಾಶಕ್ತಿ ಇರುವ ನಿಜವಾದ ಜನ ನಾಯಕ ಎಂದು ಸನ್ಮಾನಿಸಿದರು.

ಕಳೆದ 3-4 ತಿಂಗಳ ಹಿಂದೆ ನಂದಿತಾವರೆ ಬಳಿ ನಾಲೆಯಲ್ಲಿ ತುಂಬಿಕೊಂಡಿದ್ದ ಹೂಳನ್ನು ಸುಮಾರು 3 ಲಕ್ಷ ರೂ. ವೆಚ್ಚದಲ್ಲಿ ಚಂದ್ರಶೇಖರ್ ಪೂಜಾರ್ ಅವರು ತೆಗೆಸಿ ರೈತರಿಗೆ ನೆರವಾಗಿದ್ದನ್ನು ಇದೆ ಸಂದರ್ಭದಲ್ಲಿ ಸ್ಮರಿಸಿದರು.

ಗ್ರಾ.ಪಂ. ಸದಸ್ಯ ಜಯಣ್ಣ ಅಂಗಡಿ, ಬಿ.ಹೆಚ್. ಸೋಮನಗೌಡ ಕೆ.ದುರುಗಪ್ಪ, ಸಾರಥಿ ರಾಮು, ಎಸ್. ರವಿ, ಎಂ.ತಿಪ್ಪಣ್ಣ, ಎಂ. ಬಸವರಾಜ್, ಬಸವನಗೌಡ್ರು, ದೀಟೂರ್ ವಿರೂಪಾಕ್ಷಪ್ಪ, ಅಂಗಡಿ ಶಿವಣ್ಣ, ರಂಗಪ್ಪ ಜಗದೀಶ್ ಸ್ವಾಮಿ ಮತ್ತು ಹರಿಹರ ನಗರಸಭೆ ಸದಸ್ಯ ರಜನೀಕಾಂತ್, ದೀಟೂರು ನಿರಂಜನ್ ಸೇರದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

# ಅರಣ್ಯ ನಾಶದಿಂದ ಪರಿಸರ ಅಸಮತೋಲನ

## ಹರಪನಹಳ್ಳಿ: ಸಸಿ ನೆಟ್ಟು ಪರಿಸರ ಉಳಿಸಲು ತಹಶೀಲ್ದಾರ್ ಶಿವಕುಮಾರ್ ಬಿರಾದಾರ ಕರೆ



ಹರಪನಹಳ್ಳಿ, ಜೂ.5- ದಿನದಿಂದ ದಿನಕ್ಕೆ ಗಿಡ, ಮರಗಳು ನಶಿಸುವುದರಿಂದ ಭಾರತದಲ್ಲಿ ಕೇವಲ ಶೇ.22ರಷ್ಟು ಮಾತ್ರ ಅರಣ್ಯ ಪ್ರದೇಶ ಉಳಿದಿದೆ. ಇದರಿಂದ ಪರಿಸರದ ಸಮತೋಲನ ಕೆಟ್ಟುಹೋಗುತ್ತಿದೆ ಎಂದು ತಹಶೀಲ್ದಾರ್ ಡಾ. ಶಿವಕುಮಾರ್ ಬಿರಾದಾರ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಕಣಿವಿಹಳ್ಳಿ ಅರಣ್ಯ ವಲಯದಲ್ಲಿ ಕೊಂಗನಹೊಸೂರು ಕಂದಾಯ ಗ್ರಾಮದ ಸರ್ವೆ ನಂಬರ್ 188ರಲ್ಲಿ 10 ಹೆ. ಪ್ರದೇಶದಲ್ಲಿ, ಸಸಿ ನೆಡುವ ಮೂಲಕ ಭಾನುವಾರ ವಿಶ್ವ ಪರಿಸರ ದಿನಾಚರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಭಾರತದಲ್ಲಿ ಜನಸಂಖ್ಯೆ ಹೆಚ್ಚಳವಾಗಿದ್ದು, ಭೂ ಬಳಕೆಯ ಪ್ರಮಾಣ ಹೆಚ್ಚಳದಿಂದಾಗಿ ಅರಣ್ಯ ಪ್ರದೇಶವು ಜಮೀನುಗಳಾಗಿ ಮಾರ್ಪಾಡಾಗುತ್ತಿದೆ ಎಂದರು.

ಪರಿಸರ ದಿನಾಚರಣೆ ಜಾಗೃತಿ ಮೂಡಿಸುವ ಕಾರ್ಯಕ್ರಮವಾಗಿದ್ದು,. ವರ್ಷಕ್ಕೊಮ್ಮೆ ಒಂದು ಗಿಡ ಬೆಳೆಸಿ, ಉಳಿಸಿ. ಇದರಿಂದ ಪ್ರಕೃತಿ ವಿಕೋಪದಲ್ಲಿ ಮಣ್ಣಿನ ಸವಕಳಿ ತಡೆಯಬಹುದು. ಪ್ರಾಣಿ, ಪಕ್ಷಿಗಳನ್ನು ಸಂರಕ್ಷಣೆ ಮಾಡಬಹುದು ಎಂದು ಹೇಳಿದರು.

ವಲಯ ಅರಣ್ಯಾಧಿಕಾರಿ ಕೆ.ಮಲ್ಲಪ್ಪ ಮಾತನಾಡಿ, ಪರಿಸರ ಎಲ್ಲರ ಸ್ವತ್ತು. ಅದನ್ನು ಕಾಪಾಡುವ ಹೊಣೆಗಾರಿಕೆ ಎಲ್ಲರ ಮೇಲಿದೆ. ಮುಂದಿನ ಪೀಳಿಗೆಗಾಗಿ ಹಾಗೂ ಶುದ್ಧ ಆಮ್ಲಜನಕಕ್ಕಾಗಿ, ಮಾನಸಿಕ ನೆಮ್ಮದಿಗಾಗಿ, ಪರಿಸರ ಸಂರಕ್ಷಣೆ ಅತ್ಯಗತ್ಯ ಎಂದರು.

ಪರಿಸರ ಎಂದರೆ ಕೇವಲ ಗಿಡ, ಮರಗಳಲ್ಲ. ನಮ್ಮ ಸುತ್ತಮುತ್ತಲಿನ ಗುಡ್ಡಗಾಡುಗಳು, ಅರಣ್ಯ ಪ್ರದೇಶ, ನದಿಗಳನ್ನು ಒಳಗೊಂಡು ಪರಿಸರ ನಿರ್ಮಾಣವಾಗುತ್ತದೆ. ಇವುಗಳು ಉತ್ತಮ ಸ್ಥಿತಿಯಲ್ಲಿದ್ದರೆ ಮಾತ್ರ ಪರಿಸರ ಸಮತೋಲನವುಂಟಾಗುತ್ತದೆ ಎಂದು ಹೇಳಿದರು.

ಶೇ.33ರಷ್ಟಿದ್ದ ಅರಣ್ಯ ಪ್ರದೇಶ ಈಗ ಶೇ.18ಕ್ಕೆ ಕುಸಿದಿದೆ. ಪರಿಸರ ಅಸಮತೋಲನ ಸರಿದೂಗಿಸಲು ರೈತರು ಜಮೀನುಗಳ ಬದುಗಳಲ್ಲಿ ಗಿಡಗಳನ್ನು ಬೆಳೆಸಬೇಕು. ಶಾಲಾ-ಕಾಲೇಜು ಆವರಣ, ರಸ್ತೆ ಬದಿಗಳಲ್ಲಿ, ಮನೆಗಳ ಮುಂಭಾಗ ಗಿಡಗಳನ್ನು ಬೆಳೆಸಬೇಕು ಎಂದು ಕರೆ ನೀಡಿದರು.

ಸಾಮಾಜಿಕ ವಲಯ ಅರಣ್ಯಾಧಿಕಾರಿ ತೋಷನ್‌ಕುಮಾರ್, ದೈಹಿಕ ಶಿಕ್ಷಣ ಪರಿವೀಕ್ಷಕ ರೇವಣ್ಣ ಸಿ., ನಂದಿಬೇವೂರು ಗ್ರಾ.ಪಂ. ಉಪಾಧ್ಯಕ್ಷೆ ಲಕ್ಷ್ಮಿ ಚಂದ್ರಶೇಖರ್ ಮಾತನಾಡಿದರು.

ಬಾಗಳಿಯ ಆರ್‌ಎಚ್‌ಸಿ ಪ್ರೌಢಶಾಲೆ ಹಾಗೂ ಹರಪನಹಳ್ಳಿಯ ಸರ್ಕಾರಿ ಜ್ಯೂನಿಯರ್ ಕಾಲೇಜು ವಿದ್ಯಾರ್ಥಿಗಳು, ವಲಯ ಅರಣ್ಯ ಮತ್ತು ಸಾಮಾಜಿಕ ವಲಯ ಅರಣ್ಯ ಇಲಾಖೆಯ ಸಿಬ್ಬಂದಿಗಳು ಬೀಜದ ಉಂಡೆಗಳನ್ನು ಹಾಗೂ ಅರಣ್ಯ ಕೃಷಿ ಬಿತ್ತನೆಯ ಬೀಜಗಳನ್ನು ಬಿತ್ತನೆ ಮಾಡಿದರು.

ಬಿಜೆಪಿ ಮುಖಂಡ ಕಣಿವಿಹಳ್ಳಿ ಮಂಜುನಾಥ್, ಉಪವಲಯ ಅರಣ್ಯಾಧಿಕಾರಿ ರಮೇಶ್ ರಾಥೋಡ, ಮಂಜುನಾಥ, ದುರುಗಪ್ಪ, ಉಪವಲಯ ಅರಣ್ಯಾಧಿಕಾರಿ ಅಂಬರೀಷ್, ಅರಣ್ಯ ರಕ್ಷಕರಾದ ಮಂಜ್ಯಾನಾಯ್ಕ, ಶಿವಕುಮಾರ, ಸಿಬ್ಬಂದಿಗಳಾಧ ರಾಘವೇಂದ್ರ, ರೋಹನ್, ಲಕ್ಷ್ಮಣ, ಕೇದಾರ, ನೀಲಪ್ಪ, ಚಿಕ್ಕಣ್ಣ, ಹೇಮಣ್ಣ, ಬಸವರಾಜ, ಮಂಜುನಾಥ, ಶಿಕ್ಷಕರಾದ ಡಿ.ಕೆ. ವೀರೇಶ್, ಲೋಕೇಶ್ ಇತರರು ಉಪಸ್ಥಿತರಿದ್ದರು.

# ಪರಿಸರ ಸಂರಕ್ಷಣೆಯ ಸಂಕಲ್ಪ ಮಾಡೋಣ



ಹರಿಹರ, ಜೂ.5- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹರಿಹರ, ಅರಣ್ಯ ಇಲಾಖೆ, ತಾಲ್ಲೂಕು ಆಡಳಿತ ಹರಿಹರ ಇವರ ಸಂಯುಕ್ತಾಶ್ರಯದಲ್ಲಿ ಇಲ್ಲಿನ ವಿದ್ಯಾನಗರದ ಉದ್ಯಾನವನದಲ್ಲಿ ವಿಶ್ವ ಪರಿಸರ ದಿನಾಚರಣೆ ಮತ್ತು ಗಿಡ ನಾಟಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಎಸ್. ರಾಮಪ್ಪ ಅವರು, ಪ್ರತಿಯೊಬ್ಬರೂ ಸಸಿ ನೆಡುವ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗಬೇಕು. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆ, ಧರ್ಮಸ್ಥಳ ಸಂಸ್ಥೆ, ತಾಲ್ಲೂಕು ಆಡಳಿತ ಜಂಟಿಯಾಗಿ ವಿಶ್ವ ಪರಿಸರ ದಿನವನ್ನು ಆಚರಿಸಿದ್ದು ಸಂತಸ ತಂದಿದೆ. ಈ ದಿನ ನಾವೆಲ್ಲ ಪರಿಸರ ರಕ್ಷಣೆಯ ಸಂಕಲ್ಪ ಮಾಡೋಣ ಎಂದರು.

ತಹಶೀಲ್ದಾರ್ ಡಾ. ಎಂ.ಬಿ. ಅಶ್ವತ್ಥ್ ಮಾತನಾಡಿ, ಗಿಡ-ಮರಗಳ ಕೊರತೆಯಿಂದಾಗಿ ಜಾಗತಿಕ ತಾಪಮಾನ ದಿನೇ ದಿನೇ ಏರಿಕೆಯಾಗುತ್ತಿದ್ದು, ಇದು ಅಪಾಯದ ಮುನ್ಸೂಚನೆಯಾಗಿದೆ. ಆದ್ದರಿಂದ ನಾವೆಲ್ಲಾ ಗಿಡ ಮರಗಳನ್ನು ರಕ್ಷಿಸುವ ಕಾರ್ಯವನ್ನು ನಿರಂತರ ಮಾಡಬೇಕಾಗಿದೆ ಎಂದು ಹೇಳಿದರು.

ನಗರಸಭೆ ಆಯುಕ್ತ ಬಸವರಾಜ್ ಮಾತನಾಡಿ, ಪರಿಸರ ದಿನಾಚರಣೆ ಕೇವಲ 1 ದಿನಕ್ಕೆ ಸೀಮಿತವಾಗದೇ, ನಿರಂತರ ಪರಿಸರ ರಕ್ಷಣೆಯನ್ನು ಸಾಮೂಹಿಕವಾಗಿ ಮಾಡಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಗಣಪತಿ ಮಾಳಂಜಿ ಅವರು, ವೀರೇಂದ್ರ ಹೆಗ್ಗಡೆಯವರ ಆಶಯದಂತೆ ಭೂ ತಾಯಿಯನ್ನು ರಕ್ಷಿಸೋಣ,

**ಹರಿಹರ:**
**ಪರಿಸರ ದಿನಾಚರಣೆಯಲ್ಲಿ ಶಾಸಕ ಎಸ್.ರಾಮಪ್ಪ**

ಮುಂದಿನ ಪೀಳಿಗೆಗೆ ವರ್ಗಾಯಿಸೋಣ ಎಂಬ ಧ್ಯೇಯ ವಾಕ್ಯದೊಂದಿಗೆ ತಾಲ್ಲೂಕಿನಾದ್ಯಂತ ಪರಿಸರ ದಿನಾಚರಣೆ ಮತ್ತು ಗಿಡ ನಾಟಿ ಸಪ್ತಾಹವನ್ನು ಆಚರಿಸಲಾಗುತ್ತಿದ್ದು, ಪರಿಸರ ರಕ್ಷಣೆ ಇಂದಿನ ಅನಿವಾರ್ಯವಾಗಿದೆ. ನಾವೇನಾದರೂ ಅಲಕ್ಷಿಸಿದರೆ ಆಮ್ಲಜನಕವನ್ನು ಖರೀದಿಸಿ ಸೇವನೆ ಮಾಡಬೇಕಾದ ಸ್ಥಿತಿ ಬಂದೊದಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ರಾಜ್ಯಪ್ರಶಸ್ತಿ ವಿಜೇತ, ಪರಿಸರ ಪ್ರೇಮಿ ಮಿಟ್ಲಕಟ್ಟೆಯ ಸಾಲು ಮರದ ವೀರಚಾರಿಯವರನ್ನು ಸನ್ಮಾನಿಸಿ ಅವರ ಪರಿಸರ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಇದೇ ವೇಳೆ ಮಾತನಾಡಿದ ವೀರಚಾರಿ ಅವರು, ನಿಮ್ಮ ಮನೆಯಲ್ಲಿ ಉಪಯೋಗಿಸಿ ಉಳಿಯುವ ನೀರನ್ನು ಚರಂಡಿಗೆ ಹಾಕದೇ ನಿಮ್ಮ ಮನೆಯ ಎದುರಿನ ರಸ್ತೆಯ ಪಕ್ಕದಲ್ಲಿರುವ ಗಿಡಮರಗಳಿಗೆ ಹಾಕಿ ಗಿಡಗಳ ರಕ್ಷಣೆ ಮಾಡಿ ಎಂದರು.

ಅಧ್ಯಕ್ಷತೆ ವಹಿಸಿದ್ದ ವಿದ್ಯಾನಗರ ವಾರ್ಡಿನ ನಗರಸಭೆ ಸದಸ್ಯೆ ಅಶ್ವಿನಿಕೃಷ್ಣ ಅವರು, ಗಿಡಗಳನ್ನು ನಾಟಿ ಮಾಡಲು ಎಷ್ಟು ಪ್ರಾಮುಖ್ಯತೆ ನೀಡುತ್ತೇವೆಯೋ ಅವುಗಳನ್ನು ನೀರೆರೆದು ರಕ್ಷಣೆ ಮಾಡುವ ಕಾರ್ಯಕ್ಕೂ ಅಷ್ಟೇ ಪ್ರಾಮುಖ್ಯತೆ ನೀಡಬೇಕು ಎಂದರು.

**ರಕ್ಷಾರಕ್ಷೆ:** ರಾಜೇಶ್ವರಿ ಟ್ಯೂಷನ್ ತರಗತಿ ವಿದ್ಯಾರ್ಥಿಗಳು ಉದ್ಯಾನವನದಲ್ಲಿ ನೆಡಲಾದ ಗಿಡಗಳಿಗೆ ರಕ್ಷೆಯನ್ನು ಕಟ್ಟುವ **(5ನೇ ಪುಟಕ್ಕೆ)**

# ಎನ್‌ಎಸ್‌ಯುಐ ಮುಖಂಡರ ಬಿಡುಗಡೆಗೆ ಆಗ್ರಹಿಸಿ ಪ್ರತಿಭಟನೆ



ದಾವಣಗೆರೆ, ಜೂ.5- ಪಠ್ಯ ಪರಿಷ್ಕರಣೆ ವಿಷಯ ವಿವಾದ ಕುರಿತಂತೆ ಪ್ರತಿಭಟನೆ ನಡೆಸುತ್ತಿದ್ದ ಎನ್‌ಎಸ್‌ಯುಐ ಮುಖಂಡರನ್ನು ಶಿಕ್ಷಣ ಸಚಿವರ ಮನೆಗೆ ಬೆಂಕಿ ಹಚ್ಚಲು ಯತ್ನಿಸಿದರು ಎನ್ನುವ ಕಾರಣಕ್ಕಾಗಿ ಬಂಧಿಸಿದ್ದು, ಅವರನ್ನು ಈ ಕೂಡಲೇ ಬಿಡುಗಡೆ ಮಾಡುವಂತೆ ಆಗ್ರಹಿಸಿ ನಗರದಲ್ಲಿ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದಿಂದ ಉಪವಿಭಾಗಾಧಿಕಾರಿಗೆ ಮನವಿ ಸಲ್ಲಿಸಲಾಗಿದೆ.

ಕಳೆದ 1 ರಂದು ತಿಪಟೂರಿನಲ್ಲಿರುವ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರ ನಿವಾಸದ ಮುಂದೆ ಎನ್‌ಎಸ್‌ಯುಐ ಮುಖಂಡರು ಸಾಂಕೇತಿಕ ಪ್ರತಿಭಟನೆ ನಡೆಸುತ್ತಿದ್ದರು. ಈ ವೇಳೆ ಅವರನ್ನು ಪೊಲೀಸರು ಸಚಿವರ ಮನೆಗೆ ಬೆಂಕಿ ಇಡಲು ಯತ್ನಿಸಿದರು ಎನ್ನುವ ನೆಪವೊಡ್ಡಿ ಬಂಧಿಸಿದ್ದಾರೆ. 15 ಜನರನ್ನು ಬಂಧಿಸಿ ಈಗಾಗಲೇ 2 ದಿನ ಕಳೆದಿವೆ. ರಾಜಾಧ್ಯಕ್ಷ ಸೇರಿದಂತೆ, ಇತರರನ್ನು ಬಂಧಿಸಿ ತುಮಕೂರಿನ ಜೈಲಿನಲ್ಲಿ ಇಟ್ಟಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಸರೀಕರಣವು ವಿದ್ಯಾರ್ಥಿಗಳು ಮತ್ತು ಅವರ ಶಿಕ್ಷಣದ ಮೇಲೆ ಪರಿಣಾಮ ಬೀರಲು ನಾವು ಬಿಡುವುದಿಲ್ಲ. ಸಮಸ್ಯೆಗಳ ವಿರುದ್ಧ ಹೋರಾಡುವ ಪ್ರತಿಭಟನಾಕಾರರನ್ನು ಬಂಧಿಸಬಹುದು. ಆದರೆ ಪ್ರತಿಭಟನೆ ನಿಲ್ಲಿಸಲು ಸಾಧ್ಯವಿಲ್ಲ. ಕಾರಣ ಈ ಕೂಡಲೇ ಬಂಧಿತರನ್ನು ಸರ್ಕಾರ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.

ಈ ವೇಳೆ ಎನ್‌ಎಸ್‌ಯುಐನ ತಾಹೀರ್ ಸಮೀರ್, ಮಲ್ಲಿಕಾರ್ಜುನ್, ನೂರ್ ಮಹಮ್ಮದ್, ಹುಸೇನ್, ಅಯಾಜ್, ಮನೋಜ್, ಪರಮೇಶ್, ಕಾರ್ತಿಕ್, ಗಣೇಶ್ ಸೇರಿದಂತೆ, ಇತರರು ಇದ್ದರು.

# ಡಿಪ್ಲೋಮಾ ಪ್ರವೇಶಕ್ಕೆ ವಿಶೇಷಚೇತನ ವಿದ್ಯಾರ್ಥಿಗಳಿಂದ ಅರ್ಜಿ

ದಾವಣಗೆರೆ, ಜೂ. 5- ಮೈಸೂರಿನ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ವತಿಯಿಂದ ಡಿಪ್ಲೋಮಾ ಕೋರ್ಸುಗಳ ಪ್ರವೇಶಕ್ಕೆ (ಅಖಿಲ ಭಾರತ ಮಟ್ಟದಲ್ಲಿ) ವಿಶೇಷಚೇತನ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ವಿಶೇಷಚೇತನರಿಗೆ ಡಿಪ್ಲೋಮಾ ಮಟ್ಟದಲ್ಲಿ ತಾಂತ್ರಿಕ ಶಿಕ್ಷಣ ಸೌಲಭ್ಯ ಕಲ್ಪಿಸುವ ಸದುದ್ದೇಶದಿಂದ ಜೆಎಸ್‌ಎಸ್ ಮಹಾವಿದ್ಯಾಪೀಠವು ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಸ್ಥಾಪನೆ ಮಾಡಿದ್ದು, ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿನ ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ ವಿಶೇಷಚೇತನರು ಅನುಕೂಲ ಪಡೆದುಕೊಳ್ಳಬಹುದು. ಮಾಹಿತಿಗಾಗಿ 0821-2548315, 2548316 ಸಂಪರ್ಕಿಸಬಹುದು.

# ವಿದ್ಯಾರ್ಥಿ ವೇತನಕ್ಕೆ ಅರ್ಜಿ

ದಾವಣಗೆರೆ,ಜೂ.5- ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ, ಪಾರ್ಸಿ ವಿದ್ಯಾರ್ಥಿಗಳಿಗೆ ಶೇ. 50 ರಷ್ಟು ಅಂಕ ಗಳಿಸಿದ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನಿಸಿದ್ದು, ಅದರಂತೆ 2021-22ನೇ ಸಾಲಿನಲ್ಲಿ ಈ ಹಿಂದೆ ಅರ್ಜಿ ಸಲ್ಲಿಸಿರುವ ಮೆಟ್ರಿಕ್ ಪೂರ್ವ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಹ ಅಭ್ಯರ್ಥಿಗಳು ಜೂನ್ 15 ರೊಳಗೆ ಆನ್ ಲೈನ್ ವೆಬ್ ಸೈಟ್ www.ssp.karnataka.gov.in ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ : www.dom.karnataka.gov.in ಮತ್ತು ಸಹಾಯವಾಣಿ ಸಂಖ್ಯೆ: 8277799990ಗೆ ಸಂಪರ್ಕಿಸಲು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

# ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ

## ಪರಿಸರ ದಿನಾಚರಣೆ: 500 ಸಸಿ ನೆಡುವ ಅಭಿಯಾನಕ್ಕೆ ಚಾಲನೆ ನೀಡಿದ ನ್ಯಾ. ರಾಜೇಶ್ವರಿ ಹೆಗ್ಡೆ



ದಾವಣಗೆರೆ, ಜೂ.5- ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ದಾವಣಗೆರೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ರಾಜೇಶ್ವರಿ ಎನ್. ಹೆಗ್ಡೆ ತಿಳಿಸಿದರು.

ನಗರದ ಬಾಬು ಜಗಜೀವನರಾಂ ನಗರದ ಉದ್ಯಾನವನದಲ್ಲಿ ಆಯೋಜಿಸಲಾಗಿದ್ದ ವಿಶ್ವ ಪರಿಸರ ದಿನಾಚರಣೆಯಲ್ಲಿ 500 ಸಸಿಗಳನ್ನು ನೆಡುವ ಅಭಿಯಾನಕ್ಕೆ ಚಾಲನೆ ನೀಡುವ ಮೂಲಕ ಅವರು ಕಾರ್ಯಕ್ರಮ ಉದ್ಘಾಟಿಸಿದರು.

ಜನರು ಏಕ ಬಳಕೆ ಮತ್ತು ಬಿಸಾಡಬಹುದಾದ ವಸ್ತುಗಳ ಮೇಲೆ ಹೆಚ್ಚು ಅವಲಂಬಿತರಾಗಿದ್ದಾರೆ. ಇದರಿಂದಾಗಿ ಪರಿಸರ ಮಲಿನಗೊಳ್ಳುತ್ತಿದೆ. ಪ್ಲಾಸ್ಟಿಕ್ ಬಳಕೆಯಿಂದಾಗಿ ಪರಿಸರಕ್ಕೆ ತೀವ್ರ ಹಾನಿ ಉಂಟಾಗುತ್ತಿದೆ. ಅಲ್ಲದೆ, ನಮ್ಮ ನೈಸರ್ಗಿಕತೆಯ ವನ್ಯಜೀವಿಗಳು ಮತ್ತು ಸಸ್ಯ ಸಂಕುಲಗಳ ಮೇಲೆ ತೀವ್ರವಾದ ದುಷ್ಪರಿಣಾಮ ಬೀರುತ್ತಿದೆ. ಈ ಬಗ್ಗೆ ಮಾನವರು ಎಚ್ಚೆತ್ತುಕೊಳ್ಳಬೇಕು ಎಂದು ಸಲಹೆ ನೀಡಿದರು.

ಪರಿಸರ ಸಂರಕ್ಷಣೆ ಬಗ್ಗೆ ನಾಗರಿಕರು ಅರಿತುಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಮಳೆ ನೀರು ಸಂರಕ್ಷಣೆ ಸಸಿಗಳ ರಕ್ಷಣೆ ಮಾಡಬೇಕಾಗಿದೆ. ನೀವೆಲ್ಲರೂ ವಿಶ್ವ ಪರಿಸರ ಮಹತ್ವದ ಬಗ್ಗೆ, ಜವಾಬ್ದಾರಿಗಳ ಬಗ್ಗೆ ತಿಳಿದುಕೊಳ್ಳಬೇಕಾಗಿದೆ. ಪರಿಸರವನ್ನು ಬೆಳೆಸಿದರೆ ಮಾತ್ರ ಮಾನವ ಸಂಕುಲ ಉಳಿಯುತ್ತದೆ ಎಂದು ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ದಾವಣಗೆರೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ್ ಮಾತನಾಡಿ, ನಗರದ ಹಿಂದುಳಿದ ಪ್ರದೇಶಗಳಲ್ಲಿರುವ ಉದ್ಯಾನವನಗಳಲ್ಲಿ ಇಂದಿನ ಯುವಕರು ದುಶ್ಚಟಗಳನ್ನು ಮಾಡುತ್ತಿದ್ದಾರೆ. ಇದರಿಂದಾಗಿ ಉತ್ತಮವಾಗಿದ್ದ ಉದ್ಯಾನವನಗಳು ಸಹ ದುಶ್ಚಟಗಳ ತಾಣಗಳಾಗಿವೆ. ಇದು ವಿಷಾದನೀಯ ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಹಿರಿಯ ನ್ಯಾಯವಾದಿ ಎಲ್.ಎಚ್.ಅರುಣ್‌ಕುಮಾರ್ ಮಾತನಾಡಿ, ಕಳೆದ ಶತಮಾನದಲ್ಲಿ ನಾವುಗಳು ಭೂಮಿಯ ಅರ್ಧದಷ್ಟು ಗದ್ದೆಗಳನ್ನು ನಾಶಪಡಿಸಿ ಕೊಂಡಿದ್ದೇವೆ. 'ಪರಿಸರ ವ್ಯವಸ್ಥೆಯ ಪುನರುಜ್ಜೀವನ' ಎಂಬ ಧ್ಯೇಯ ವಾಕ್ಯದೊಂದಿಗೆ ವಿಶ್ವ ಸಂಸ್ಥೆಯು ಪರಿಸರ ದಿನಾಚರಣೆಯನ್ನು ಆಚರಿಸುತ್ತಿದೆ. ಕಾರಣ ಈ ನಿಟ್ಟಿನಲ್ಲಿ ನಾವುಗಳು ಪರಿಸರ ರಕ್ಷಣೆ ಮಾಡುವ ಮೂಲಕ ಪ್ರಕೃತಿಯ ಮೇಲಿನ ಜೀವ ಸಂಕುಲ, ಸಸ್ಯ ಸಂಕುಲವನ್ನು ಸಂರಕ್ಷಿಸುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ಎಐಡಿ ಸಂಸ್ಥೆಯ ಕಾರ್ಯದರ್ಶಿ ಡಿ.ಎಸ್.ಬಾಬಣ್ಣ ವಹಿಸಿದ್ದರು. ಸಮಾರಂಭದಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ. ಪಿ.ಬಸವರಾಜ್ ಮಾತನಾಡಿದರು. ಪಾಲಿಕೆಯ ಸದಸ್ಯರಾದ ಸುಧಾ, ಇಟ್ಟಿಗುಡಿ ಮಂಜುನಾಥ್, ನ್ಯಾಯಾಧೀಶರಾದ ಸಿದ್ಧರಾಜು, ಪ್ರಶಾಂತ್, ಉತ್ತರ ವಲಯದ ಬಿಇಓ ಅಂಬಣ್ಣ, ವಕೀಲರಾದ ಎನ್. ಎಂ.ಆಂಜನೇಯ ಇತರರು ಇದ್ದರು.

ಇದೇ ವೇಳೆ ಆ ಭಾಗದ ನಾಗರಿಕರು ಮತ್ತು ಯುವಕರಿಗೆ ಸಸಿಗಳನ್ನು ವಿತರಿಸಲಾಯಿತು. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಆ್ಯಕ್ಷನ್ ಇನಿಷಿಯೇಟಿವ್ ಫಾರ್ ಡೆವಲಪ್‌ಮೆಂಟ್, ಜಿಲ್ಲಾ ವಕೀಲರ ಸಂಘ, ಅರಣ್ಯ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

# ಹರಪನಹಳ್ಳಿ: ನೂರು ಗಿಡನೆಟ್ಟ ಬಿಜೆಪಿ ತಾಲ್ಲೂಕು ಮುಖಂಡರು

ಹರಪನಹಳ್ಳಿ, ಜೂ.5- ಪರಿಸರ ದಿನದ ಅಂಗವಾಗಿ ಪಟ್ಟಣದ ಕಾಶಿ ಸಂಗಮೇಶ್ವರ ಬಡಾವಣೆಯಲ್ಲಿ ತಾಲ್ಲೂಕು ಬಿಜೆಪಿ ಘಟಕದ ವತಿಯಿಂದ ಸುಮಾರು ಒಂದು ನೂರಕ್ಕೂ ಹೆಚ್ಚು ಸಸಿಗಳನ್ನು ನೆಡಲಾಯಿತು.

ಈ ವೇಳೆ ಮಾತನಾಡಿದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಾಮ ನಿರ್ದೇಶಿತ ಸದಸ್ಯ ಆರುಂಡಿ ನಾಗರಾಜ್, ಪರಿಸರ ಚೆನ್ನಾಗಿದ್ದರೆ ಪ್ರಕೃತಿಯಲ್ಲಿ ಯಾವುದೇ ವಿಕೋಪ ಕಂಡುಬರುವುದಿಲ್ಲ. ಆದ್ದರಿಂದ ಮನುಷ್ಯನ ಉಳಿವಿಗಾಗಿ ಪರಿಸರದ ರಕ್ಷಣೆ ಅತ್ಯಗತ್ಯ. ಹಾಗಾಗಿ ಇಂದಿನಿಂದಲೇ ನಾವೆಲ್ಲರೂ ಅರಣ್ಯ ಉಳಿಸಲು ಕಾರ್ಯ ಪ್ರವೃತ್ತರಾಗೋಣ. ಪ್ರತಿ ಮನೆಯ ಸುತ್ತಮುತ್ತ ಗಿಡಮರಗಳನ್ನು ಬೆಳೆಸಿ ಪರಿಸರ ಕಾಪಾಡಿಕೊಳ್ಳೋಣ ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ಬಿಜೆಪಿ ಅಧ್ಯಕ್ಷ ಸುತ್ತೂರು ಹಾಲೇಶ್, ಸಹಕಾರಿ ಸಂಘದ ರಾಜ್ಯ ಉಪಾಧ್ಯಕ್ಷ ಜಿ.ನಂಜನಗೌಡ, ಬಿಜೆಪಿ ಮಹಿಳಾ ಮೋರ್ಚಾದ ಜಿಲ್ಲಾಧ್ಯಕ್ಷೆ ಆರುಂಡಿ ಸುವರ್ಣ ನಾಗರಾಜ್, ಎಂ.ಪಿ. ನಾಯ್ಕ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾದ ಶ್ರೀಮತಿ ಎಂ. ಪ್ರಭಾವತಿ ಅಶೋಕ್, ಪುರಸಭೆ ಸದಸ್ಯ ಹಾರಾಳ ಅಶೋಕ್, ಕಲ್ಲೇರ್ ಬಸವರಾಜ್, ಮುಖಂಡರಾದ ಉದಯ್ ಕುಮಾರ್, ಜೆ. ಓಂಕಾರಗೌಡ್ರು, ರಮೇಶ್‌ಕುಮಾರ್, ಮಂಜಾನಾಯ್ಕ್, ವೆಂಕಟೇಶ್ ನಾಯ್ಕ್, ಚನ್ನನಗೌಡ, ಯುವ ಮೋರ್ಚಾ ಜಿಲ್ಲಾ ಕಾರ್ಯದರ್ಶಿ ಪಿ.ವಿ. ಅಕ್ಷಯ್ ಕುಮಾರ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.



# ಗಿಡ ಮರಗಳನ್ನು ಬೆಳೆಸಿ ದೀರ್ಘಾಯುಷಿಗಳಾಗಿ



ದಾವಣಗೆರೆ, ಜೂ.5- ಆಧುನೀಕರಣದ ನೆಪದಲ್ಲಿ ಸಾವಿರಾರು ಮರಗಳನ್ನು ಕಡಿದು ಪರಿಸರಕ್ಕೆ ಸಿಗುವ ಆಕ್ಸಿಜನ್ ಪ್ರಮಾಣ ಕಡಿಮೆಯಾಗುತ್ತಿದೆ. ಕೊರೊನಾ 2ನೇ ಅಲೆ ಸಂದರ್ಭದಲ್ಲಿ ಆಕ್ಸಿಜನ್ ಸಿಗದೆ ದೇಶದಾದ್ಯಂತ ಸಾವಿರಾರು ಜನರು ನರಳಾಡಿದ್ದನ್ನು ನೋಡಿದ್ದೇವೆ. ನಾವು ಹೆಚ್ಚು ಹೆಚ್ಚು ಗಿಡ ಮರಗಳನ್ನು ನೆಟ್ಟು ಬೆಳೆಸುವುದರ ಮೂಲಕ ಆಕ್ಸಿಜನ್ ಪ್ರಮಾಣವನ್ನು ವಾತಾವರಣದಲ್ಲಿ ಹೆಚ್ಚು ಮಾಡಿದರೆ ಮನುಷ್ಯ ಆರೋಗ್ಯವಂತರಾಗಿ ದೀರ್ಘ ಕಾಲ ಬದುಕ ಬಹುದು ಎಂದು ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಪಿ. ಕುಮಾರ್ ಅಭಿಪ್ರಾಯ ಪಟ್ಟರು.

ನಗರದ ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಕಾಲೇಜಿನ ಆವರಣದಲ್ಲಿ ಎನ್.ಎಸ್.ಎಸ್. ವತಿಯಿಂದ ಸಸಿಗಳನ್ನು ನೆಡುವ ಕಾರ್ಯಕ್ರಮ ಕುರಿತು ಮಾತನಾಡಿದ ಅವರು ರಸ್ತೆ ಅಗಲೀಕರಣ, ವಿದ್ಯುತ್ ಸಂಪರ್ಕ ಇನ್ನೂ ಮುಂತಾದ ಕೆಲಸಗಳ ಹೆಸರಿನಲ್ಲಿ ಲಕ್ಷಾಂತರ ಮರಗಳ ಮಾರಣ ಹೋಮವಾಗುತ್ತಿದೆ. ಈ ದೇಶದ ಪ್ರತಿಯೊಬ್ಬ ಪ್ರಜೆಯು ತನ್ನ ಜೀವಿತ ಅವಧಿಯಲ್ಲಿ ಒಂದು ಮರವನ್ನು ಬೆಳೆಸಿ, ಪೋಷಿಸಿದರೆ ಸಾಕು. ನಮ್ಮ ಪರಿಸರ ಎಷ್ಟೋ ಸುಧಾರಿಸುತ್ತದೆ. ನಮ್ಮ ಮುಂದಿನ ಪೀಳಿಗೆಗೆ ಪ್ರಕೃತಿಯನ್ನು ಉಳಿಸುವ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ನಿರಂತರವಾಗಿ ಸರ್ಕಾರಗಳು ಪರಿಸರ ಸ್ನೇಹಿ ಅಭಿವೃದ್ಧಿಗಳನ್ನು ಹಾಕಿಕೊಳ್ಳುವುದರ ಮೂಲಕ ಪ್ರಕೃತಿ ನಾಶವನ್ನು ತಡೆಯಬೇಕು. ಪರಿಸರ ಮಾಲಿನ್ಯವು ಜೀವಿಗಳಿಗೆ ನೇರವಾಗಿ ಹಾನಿ ಮಾಡುವುದರಿಂದ ನಾವು ತಮ್ಮ ಪರಿಸರವನ್ನು ರಕ್ಷಿಸಲು ವಿಶೇಷ ಗಮನ ಹರಿಸಬೇಕು. ವಿಶ್ವ ಪರಿಸರ ದಿನದ ಮುಖ್ಯ ಉದ್ದೇಶ ಪರಿಸರದ ಮಹತ್ವವನ್ನು ಅರಿಯುವುದು ಮತ್ತು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದಾಗಿದೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಎನ್.ಎಸ್.ಎಸ್. ಘಟಕ-1ರ ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ. ಪ್ರಭಾವತಿ ಎಸ್. ಹೊರಡಿ, ಎನ್.ಎಸ್.ಎಸ್. ಘಟಕ-2ರ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ. ಹೆಚ್.ಎಂ. ಲೋಹಿತ್ ಭಾಗವಹಿಸಿದ್ದರು.

# ಎಷ್ಟೇ ಅಪಪ್ರಚಾರ ಮಾಡಿದರೂ ಸತ್ಯಕ್ಕೇ ಜಯ

## ಹರಿಹರ: ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ




ಹರಿಹರ, ಜೂ. 5- ವಿಪಕ್ಷಗಳು ಮತ್ತು ದೇಶದ್ರೋಹಿ ಶಕ್ತಿಗಳು ಮೋದಿ ಸರ್ಕಾರದ ವಿರುದ್ಧ ಎಷ್ಟೇ ಅಪಪ್ರಚಾರ ಮಾಡಿದರೂ ಕೊನೆಗೂ ಸತ್ಯಕ್ಕೆ ಜಯ ಕಟ್ಟಿಟ್ಟ ಬುತ್ತಿ ಎಂದು ಬಿಜೆಪಿ ಜಿಲ್ಲಾ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಹೇಳಿದರು.

ಭಾನುವಾರ ನಗರದ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ನಗರ ಮತ್ತು ಗ್ರಾಮಾಂತರ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕಾರಿಣಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಯಾವಾಗಲೂ ಒಳ್ಳೆಯ ಶಕ್ತಿ ವಿರುದ್ಧ ಕೆಟ್ಟ ಶಕ್ತಿಗೇ ಸೋಲು. ಅಧರ್ಮದ ವಿರುದ್ಧ ಧರ್ಮಕ್ಕೆ ಜಯ ಎಂಬುದು ಸಾಬೀತಾಗಿದೆ. ಪ್ರಧಾನಿ ಮೋದಿ ದೇಶಕ್ಕಷ್ಟೇ ಅಲ್ಲ, ವಿಶ್ವಕ್ಕೇ ನಾಯಕರಾಗಿದ್ದಾರೆ. ಅಭಿವೃದ್ಧಿ ಹೊಂದಿದ ದೇಶಗಳ ನಾಯಕರು ಕೂಡ ಮೋದಿ ಅವರನ್ನು ಗೌರವಿಸುತ್ತಿದ್ದಾರೆ. ವಿಶ್ವ ನಾಯಕ ಎಂದು ಒಪ್ಪಿಕೊಳ್ಳುತ್ತಿದ್ದಾರೆ. ವಿಶ್ವವನ್ನು ಒಗ್ಗೂಡಿಸುವ ಶಕ್ತಿ ನರೇಂದ್ರ ಮೋದಿ ಅವರಿಗೆ ಮಾತ್ರ ಇದೆ. ದೇಶದ ಸಂಸ್ಕೃತಿ ಮತ್ತು ಮೌಲ್ಯಗಳನ್ನು ಪ್ರಪಂಚಕ್ಕೆ ತೋರಿಸಿ ಕೊಟ್ಟ ಕೀರ್ತಿ ಮೋದಿ ಅವರಿಗೆ ಸಲ್ಲುತ್ತದೆ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಾಂತರಾಜ್ ಪಾಟೀಲ್ ಮಾತನಾಡಿ, 1 ರಿಂದ 15ನೇ ತಾರೀಖಿನವರೆಗೆ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಜನ ಸಾಮಾನ್ಯರಿಗೆ ಮುಟ್ಟಿಸುವ ನಿಟ್ಟಿನಲ್ಲಿ ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಗ್ರಾಮಾಂತರ ಘಟಕದ ಅಧ್ಯಕ್ಷ ಎಂ.ಪಿ. ಲಿಂಗರಾಜ್ ಹಿಂಡಸಘಟ್ಟ ಮಾತನಾಡಿ, ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಹರಿಹರದಲ್ಲಿ ಬಿಜೆಪಿ ಗೆಲ್ಲಬೇಕಿದೆ. ಈ ನಿಟ್ಟಿನಲ್ಲಿ ಎದುರಾಗುವ ತಾಪಂ, ಜಿಪಂ ಚುನಾವಣೆಗಳನ್ನು ಸಮರ್ಥವಾಗಿ ಎದುರಿಸಿದರೆ ಮುಂದಿನ ಚುನಾವಣೆಗೆ ವೇದಿಕೆ ಸಿದ್ಧವಾಗಲಿದೆ ಎಂದು ಹೇಳಿದರು.

ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಪ್ರಧಾನ ಕಾರ್ಯದರ್ಶಿಗಳಾದ ಕೆ.ಎನ್. ಹಳ್ಳಿ. ಮಹಾಂತೇಶ್, ಹೆಚ್. ಮಂಜಾನಾಯ್ಕ, ವೀರೇಶ್ ಆದಾಪುರ, ನಗರಸಭಾ ಸದಸ್ಯರಾದ ಅಶ್ವಿನಿ ಕೃಷ್ಣ, ಆಟೋ ಹನುಮಂತಪ್ಪ, ಮಲೇಬೆನ್ನೂರು ಪುರಸಭಾ ಸದಸ್ಯರಾದ ಗೌಡ್ರು ಮಂಜಣ್ಣ, ಬೆಣ್ಣೆಹಳ್ಳಿ ಸಿದ್ದೇಶಿ, ಜಿಗಳೇರ ಹಾಲೇಶಪ್ಪ, ಬೆಳಕೆರೆ ಮಂಜುನಾಥ, ಜಿಲ್ಲಾ ಕಾರ್ಯದರ್ಶಿ ಗೀತಮ್ಮ ಮುಖಂಡರಾದ ಗೋವಿನಾಳ್ ರಾಜಣ್ಣ, ಹೆಚ್. ಶಿವಾನಂದಪ್ಪ, ರಾಜು ರೋಖಡೆ, ಕೆ.ಜಿ. ಕೃಷ್ಣ, ಬಿ.ಎಂ. ಹಾಲೇಶ್, ಸಿದ್ದೇಶ್, ಉಮೇಶ್ ಬೇವಿನಹಳ್ಳಿ, ಕೆಂಚನಹಳ್ಳಿ ಮಹಂತೇಶ್, ರವಿ ರಾಯ್ಕರ್, ಸುನೀಲ್ ಕುಮಾರ್, ಅದ್ವೈತ್ ಶಾಸ್ತ್ರೀ, ಕಾರ್ತಿಕ್, ಸುರೇಶ್ ತೇರದಾಳ, ವೀರೇಶ್ ಆಚಾರ್, ರಾಜು ಆಟೋ, ರಾಜು ಐರಣಿ, ಮಲ್ಲಿಕಾರ್ಜುನ್, ಹೆಚ್.ಎಸ್. ರಾಘವೇಂದ್ರ, ಪ್ರಶಾಂತ್ ಕುಮಾರ್ ಜಿ.ಎಂ., ಭರತ್ ಶೆಟ್ಟಿ, ಸಾಕ್ಷಿ ಶಿಂಧೆ, ರಶ್ಮಿ ಕಾಟ್ವೆ, ಸುಧಾ ಸೋಳಂಕಿ, ಸಾವಿತ್ರಮ್ಮ ಅಂಬುಜಾ ಬಾಯಿ ರಾಜೋಳಿ, ಲೋಕಿಕೆರೆ ಅಣ್ಣಪ್ಪ, ಗಿರೀಶ್ ಹೆಚ್, ಆನಂದ್, ರಮೇಶ್, ಕುಮಾರ್ ಹೊಳೆಸಿರಿಗೆರೆ, ಮಂಜಣ್ಣ, ರಾಘವೇಂದ್ರ ದೀಕ್ಷಿತ್, ಮಲ್ಲಿಕಾರ್ಜುನ್, ಗಂಗಾಧರ ದುರುಗೋಜಿ, ಮಧು, ಸನಾವುಲ್ಲಾ ಇತರರಿದ್ದರು.

# ರಾಣೇಬೆನ್ನೂರು ಮಕ್ಕಳ ಆಸ್ಪತ್ರೆಯಲ್ಲಿ ಅವಧಿ ಮೀರಿದ ಔಷಧಿ; ಪೋಷಕರ ಆತಂಕ



ರಾಣೇಬೆನ್ನೂರು, ಜೂ.5- ನಗರದ ಪ್ರಸಿದ್ಧ ಖಾಸಗಿ ಮಕ್ಕಳ ಆಸ್ಪತ್ರೆಯಲ್ಲಿ ರೋಗಿಗಳಿಗೆ ಅವಧಿ ಮೀರಿದ ಔಷಧಿ ಪೂರೈಕೆ ಮಾಡುತ್ತಿದ್ದು, ಸದರಿ ಆಸ್ಪತ್ರೆ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಸಾರ್ವಜನಿಕರು ತಾಲ್ಲೂಕು ಆರೋಗ್ಯಾಧಿಕಾರಿಗೆ ಮನವಿ ಸಲ್ಲಿಸಿದರು.

ರೈತ ಮುಖಂಡ ಹನುಮಂತಪ್ಪ ಕಬ್ಬಾರ ಮಾತನಾಡಿ, ಚಿಕ್ಕ ಮಕ್ಕಳ ಆಸ್ಪತ್ರೆಯಲ್ಲಿ ಅವಧಿ ಮೀರಿದ ಔಷಧಿಗಳನ್ನು ನೀಡುವುದರಿಂದ ಮಕ್ಕಳ ಭವಿಷ್ಯದ ಮೇಲೆ ಅಂಗವಿಕಲತೆ ಮುಂತಾದ ಗಂಭೀರ ಪರಿಣಾಮಗಳು ಉಂಟಾಗುವ ಸಾಧ್ಯತೆಗಳಿವೆ. ಆಸ್ಪತ್ರೆಯವರು ರೋಗಿಗಳಿಗೆ ನೀಡಿರುವ ಬಿಲ್‌ಗಳಲ್ಲಿ ಅವಧಿ ಮೀರಿದ ಔಷಧಿ ಕುರಿತು ಉಲ್ಲೇಖ ಸಹ ಇದೆ. ಮಕ್ಕಳ ಪೋಷಕರು ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ. ಕೂಡಲೇ ಆಸ್ಪತ್ರೆಯ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕಬ್ಬೂರು ಆಗ್ರಹಿಸಿದರು.

ಪ್ರಶಾಂತ್ ಬಾಳನಗೌಡ್ರ, ಸಂತೋಷ್ ಹನುಮಾಪುರ, ಶಿವು ಮುದಗಣ್ಣನವರು, ವಿನಯ ಬಾಳನಗೌಡ್ರ, ಕೊಟ್ರೇಶ್ ದುಗ್ಗತ್ತಿ, ಎಮ್.ಡಿ. ಹಸೀನ್, ಅರ್ಜುನ್ ಚಕ್ರಸಾಲಿ ಸೇರಿದಂತೆ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ ಜಾರಿ

ದಾವಣಗೆರೆ, ಜೂ.5 - ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ಮುಂಗಾರು ಹಂಗಾಮಿನ ಅವಧಿಗೆ ಜಿಲ್ಲೆಯಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ವಿಮಾ ಯೋಜನೆಯನ್ನು ಜಾರಿಗೊಳಿಸುತ್ತಿದ್ದು, ತೋಟಗಾರಿಕೆ ಬೆಳೆಗಳನ್ನು ನೋಂದಾಯಿಸಿಕೊಳ್ಳಬಹುದಾಗಿದೆ.

ರೈತರು ತೋಟಗಾರಿಕೆ ಬೆಳೆಗಳಾದ ಅಡಿಕೆ ಬೆಳೆಗೆ ಪ್ರತಿ ಹೆಕ್ಟೇರ್‌ಗೆ ರೂ.1,28,000 ವಿಮಾ ಮೊತ್ತಕ್ಕೆ 6400.ರೂ, ದಾಳಿಂಬೆ ಬೆಳೆಗೆ ಪ್ರತಿ ಹೆಕ್ಟೇರ್‌ಗೆ ರೂ.1,27,000 ವಿಮಾ ಮೊತ್ತಕ್ಕೆ 6350.ರೂ, ವೀಳ್ಯದೆಲೆ ಬೆಳೆಗೆ ಪ್ರತಿ ಹೆಕ್ಟೇರ್‌ಗೆ ರೂ.1,17,000 ವಿಮಾ ಮೊತ್ತಕ್ಕೆ 5850.ರೂ, ಕಾಳುಮೆಣಸು ಬೆಳೆಗೆ ಪ್ರತಿ ಹೆಕ್ಟೇರ್‌ಗೆ ರೂ.47,000 ವಿಮಾ ಮೊತ್ತಕ್ಕೆ 2350.ರೂ, ಮಾವು ಬೆಳೆಗೆ ಪ್ರತಿ ಹೆಕ್ಟೇರ್‌ಗೆ ರೂ.80,000 ವಿಮಾ ಮೊತ್ತಕ್ಕೆ 4000.ರೂ ಪ್ರತಿ ಹೆಕ್ಟೇರ್‌ಗೆ ವಿಮಾ ಕಂತು ಪಾವತಿಸಬೇಕು.

ಅಡಿಕೆ, ದಾಳಿಂಬೆ, ವೀಳ್ಯದೆಲೆ, ಕಾಳುಮೆಣಸು ಬೆಳೆಗಳ ವಿಮಾ ಮೊತ್ತ ಪಾವತಿಸಲು ಜೂ.30 ಕೊನೆಯ ದಿನವಾಗಿದೆ, ಮತ್ತು ಮಾವು ಬೆಳೆಗಳ ವಿಮಾ ಮೊತ್ತ ಪಾವತಿಸಲು ಜು.31 ಅಂತಿಮ ದಿನವಾಗಿದೆ. ರೈತರು ಬೆಳೆಗಳ ವಿಮೆ ಕಂತನ್ನು ಎಸ್.ಬಿ.ಐ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ ವಿಮಾ ಸಂಸ್ಥೆ (ಟೋಲ್ ಫ್ರೀ ನಂ: 18001021111) ಯಲ್ಲಿ ಪಾವತಿಸಿ, ನೋಂದಣಿ ಮಾಡಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ರೈತರು ಸಮೀಪದ ಬ್ಯಾಂಕ್ ಶಾಖೆ, ಗ್ರಾಮ ಪಂಚಾಯಿತಿ ಕಚೇರಿ, ಸಾಮಾನ್ಯ ಸೇವಾ ಕೇಂದ್ರಗಳು, ರೈತ ಸಂಪರ್ಕ ಕೇಂದ್ರ, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರು ಅಥವಾ ಆಯಾ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ದೂ.ಸಂ ದಾವಣಗೆರೆ 08192-297090, 08192-250153 /9482129648, ಚನ್ನಗಿರಿ 08189-228170/9449759777, ಹೊನ್ನಾಳಿ 08188-252990/8296358345, ನ್ಯಾಮತಿ 08188-252990/8296358345, ಹರಿಹರ 08192-242803 /7625078054, ಜಗಳೂರು 08196-227389/ 9353175240ಗೆ ಸಂಪರ್ಕಿಸಬಹುದೆಂದು ತೋಟಗಾರಿಕೆ ಉಪನಿರ್ದೇಶಕರು (ಜಿ.ಪಂ) ತಿಳಿಸಿದ್ದಾರೆ.

## ಕರಾಮುವಿಯಿಂದ ಯುಜಿಸಿ-ನೆಟ್ ಮತ್ತು ಕೆ-ಸೆಟ್ ಪರೀಕ್ಷೆಗೆ ತರಬೇತಿ

ದಾವಣಗೆರೆ, ಜೂ. 5-ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 'ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ'ದ ವತಿಯಿಂದ ನವದೆಹಲಿಯ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದವರು ನಡೆಸಲಿರುವ ಕಿರಿಯ ಶಿಷ್ಯವೇತನ ಸಂಶೋಧಕರ, ಸಹಾಯಕರ (ಜೆಆರ್‌ಎಫ್) ಮತ್ತು ಪದವಿ ಕಾಲೇಜು ಸಹಾಯಕ ಪ್ರಾಧ್ಯಾಪಕರ ರಾಷ್ಟ್ರ ಮಟ್ಟದ ಅರ್ಹತಾ ಪರೀಕ್ಷೆ (ಯುಜಿಸಿ-ನೆಟ್)ಗೆ ಮತ್ತು ಕರ್ನಾಟಕ ಸರ್ಕಾರ ನಡೆಸಲಿರುವ ರಾಜ್ಯ ಮಟ್ಟದ ಪದವಿ ಕಾಲೇಜು ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (ಕೆ-ಸೆಟ್)ಗೆ 45 ದಿನಗಳ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿದೆ.

ಆಸಕ್ತರು ಇದೇ ದಿನಾಂಕ 10ರೊಳಗಾಗಿ ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಕಛೇರಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬಹುದು. ವಿವರಗಳಿಗೆ ದೂರವಾಣಿ ಸಂಖ್ಯೆ 0821-2515944ಗೆ ಸಂಪರ್ಕಿಸಬಹುದಾಗಿದೆ ಎಂದು ಕರಾಮುವಿ ಕುಲಸಚಿವರಾದ ಪ್ರೊ.ಆರ್.ರಾಜಣ್ಣ ತಿಳಿಸಿದ್ದಾರೆ.

## ನರೇಗಾ ಕೂಲಿ ಹಣ ಬಿಡುಗಡೆಗೆ ಕಾರ್ಮಿಕರ ಆಗ್ರಹ



ದಾವಣಗೆರೆ, ಜೂ.5- ನರೇಗಾದಲ್ಲಿ ಕೆಲಸ ಮಾಡಿರುವ ಕೂಲಿ ಕಾರ್ಮಿಕರಿಗೆ ಹಣ ಬಿಡುಗಡೆ ಮಾಡುವಂತೆ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ ನೇತೃತ್ವದಲ್ಲಿ ನರೇಗಾ ಕೂಲಿ ಕಾರ್ಮಿಕರು ಜಿಲ್ಲಾ ಪಂಚಾಯತ್ ಸಿಇಓ ಡಾ. ಎ. ಚೆನ್ನಪ್ಪಗೆ ಅವರಿಗೆ ಮನವಿ ಸಲ್ಲಿಸಿದರು. ಕೂಡಲೇ ಕೂಲಿ ಕೆಲಸಗಾರರ ಖಾತೆ ಹಣ ಜಮಾ ಮಾಡುವಂತೆ ಆಗ್ರಹಿಸಲಾಯಿತು.

ಜಗಳೂರು ತಾಲ್ಲೂಕು ದೊಣ್ಣೆಹಳ್ಳಿ ಜಿ.ಪಿ. ಸುಭಾಷ್ ನಗರ, ಹೊಸಹಟ್ಟಿ, ಮರೆಮ್ಮನಹಳ್ಳಿ, ಪಲ್ಲಾಗಟ್ಟೆ, ತಾರೀಹಳ್ಳಿ ಗೋಡೆ, ದಿದ್ದಿಗೆ, ಉಚ್ಚಂಗಿಪುರ, ಮುಳ್ಳೂರು, ಮುಳ್ಳೂರು ಗ್ರಾಮ ಪಂಚಾಯ್ತಿಯಲ್ಲಿ ಜಾಬ್ ಫಾರಂ ಕೊಟ್ಟು ಒಂದು ತಿಂಗಳಾದರೂ ಕೆಲಸ ನೀಡುತ್ತಿಲ್ಲ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಮಾರ್ಚ್ 22ರ ನರೇಗಾ ವರ್ಷದ ಕೊನೆಯ ತಿಂಗಳಲ್ಲಿ ಕೆಲಸ ಮಾಡಿದ ಕೂಲಿಯ ಹಣ ಇಲ್ಲಿಯವರೆಗೂ ಜಮಾ ಆಗಿಲ್ಲ. ಕೂಡಲೇ ಕೆಲಸ ಮಾಡಿದ ಕೂಲಿ ಕಾರ್ಮಿಕರಿಗೆ ಕೂಲಿಯ ಜೊತೆಗೆ ಕೂಲಿ ಭತ್ಯೆ ನೀಡಬೇಕು. ಕುಟುಂಬದ ನಿರ್ವಹಣೆ ಕಷ್ಟಕರವಾಗಿದ್ದು ಕೂಲಿ, ಭತ್ಯೆ ಜೊತೆಗೆ ನಷ್ಟ ಪರಿಹಾರವನ್ನು ಕೊಡಬೇಕು. ಉದ್ಯೋಗ ಖಾತ್ರಿ ಕಾನೂನಿನಲ್ಲಿ 15 ದಿನಗಳೊಳಗಾಗಿ ಕೆಲಸ ನಿರ್ವಹಿಸಿದ ಎಲ್ಲಾ ಕೂಲಿ ಕಾರ್ಮಿಕರಿಗೆ ಕೂಲಿ ಪಾವತಿಸಬೇಕು ಎಂಬ ಕಾನೂನು ಇದ್ದರೂ, ಕೂಲಿ ಪಾವತಿಸಲು ಆಗದ ಕಾರಣ, ಕೂಲಿ ಭತ್ಯೆ ಹಾಗೂ ನಷ್ಟ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ನರೇಗಾದಡಿ ಏಪ್ರಿಲ್ ತಿಂಗಳಿಂದಲೂ ಕುಟುಂಬಗಳಿಂದ ಸದಸ್ಯರನ್ನು ಬೇರ್ಪಡಿಸಿ, ಹೊಸ ಜಾಬ್ ಕಾರ್ಡ್ ನೀಡಲು ನರೇಗಾ ತಂತ್ರಾಂಶದಲ್ಲಿ ಅವಕಾಶವಿರುವುದಿಲ್ಲ. ಕೂಡಲೇ ಈ ಸಮಸ್ಯೆಯನ್ನು ಇತ್ಯರ್ಥ ಪಡಿಸಿಕೊಡಬೇಕು. ಏಪ್ರಿಲ್‌ನಿಂದ ಈ ಕಾರ್ಮಿಕರು ಕೆಲಸಕ್ಕೆ ಹೋಗದೇ ಮನೆಯಲ್ಲಿಯೇ ಇದ್ದಾರೆ. ಕೂಡಲೇ ಜಾಬ್ ಕಾರ್ಡ್ ವಿತರಿಸುವಂತೆ ಆಗಬೇಕು ಎಂಬಿತ್ಯಾದಿ ಬೇಡಿಕೆಗಳ ಈಡೇರಿಕೆಗೆ ಮನವಿ ಮಾಡಲಾಗಿದೆ.

ಈ ವೇಳೆ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ ಅಧ್ಯಕ್ಷೆ ನಾಗರತ್ನ ಹುಚ್ಚಂಗಿಪುರ, ಕಾರ್ಯಕರ್ತರಾದ ಟಿ.ಎಸ್. ಸುಧಾ ಪಲ್ಲಾಗಟ್ಟೆ, ಸಂಜೀವಮ್ಮ ಯಲ್ಲಮ್ಮ ಮಾಲಾ, ರೂಪಾ, ಸಿದ್ದಪ್ಪ, ಕೃಷ್ಣಪ್ಪ, ಸಿದ್ದಮ್ಮ ನಾಗರತ್ನ ಸೇರಿದಂತೆ ಇತರರು ಇದ್ದರು.

## ಮಾ.ಸ.ಬ. ಕಾಲೇಜಿನಲ್ಲಿ 'ಹೊಂಬೆಳಕು ಭಾಗ-2' ಕವನ ಸಂಕಲನ ಬಿಡುಗಡೆ



ದಾವಣಗೆರೆ, ಜೂ.5- ನಗರದ ಮಾ.ಸ.ಬ. ಕಲಾ ಮತ್ತು ವಾಣಿಜ್ಯ ಕಾಲೇಜಿನ ವತಿಯಿಂದ 'ಹೊಂಬೆಳಕು ಭಾಗ-2' ಕವನ ಸಂಕಲನ ಬಿಡುಗಡೆ ಸಮಾರಂಭ ಏರ್ಪಡಿಸಲಾಗಿತ್ತು.

ಮಾ.ಸ.ಬ. ಕಲಾ ಮತ್ತು ವಾಣಿಜ್ಯ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಇಂದೂಧರ ನಿಶಾನಿಮಠ, ಕಾರ್ಯದರ್ಶಿ ಇ. ಬಸವರಾಜ್ ಕವನ ಸಂಕಲನ ಕುರಿತು ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲ ಪ್ರೊ. ಎ.ಡಿ. ಬಸಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಯೋಜಕ ಪ್ರೊ. ಎಂ. ಮಂಜಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ಐಕ್ಯೂಎಸಿ ಕೋ-ಆರ್ಡಿನೇಟರ್ ಪ್ರೊ. ಕೆ.ಎಸ್.ಎನ್. ರಾವ್ ಉಪಸ್ಥಿತರಿದ್ದರು. ಡಾ. ಓ. ಪ್ರವೀಣ್ ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

## ಆನ್‌ಲೈನ್ ಸೇವೆಯ ಸ್ಟಿಕ್ಕರ್‌ಗೆ ಚಾಲನೆ



**ಹರಿಹರ**

ಹರಿಹರ, ಜೂ. 5 - ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ಆದೇಶದಂತೆ ಅಗತ್ಯ ಆನ್‌ಲೈನ್ ಸೇವೆಗಳ ಮಾಹಿತಿಗಳನ್ನು ಮನೆ ಮನೆಗೆ ತಲುಪಿಸಲು, ಮನೆಗಳಿಗೆ ಸ್ಟಿಕ್ಕರ್‌ಗಳನ್ನು ಹಚ್ಚುವುದಕ್ಕೆ ಚಾಲನೆ ನೀಡಲಾಗಿದೆ.

ನಗರಸಭೆ ಅಧ್ಯಕ್ಷೆ ಶಾಹೀನಾಬಾನು ದಾದಾಪೀರ್ ಪೌರಾಯುಕ್ತ ಐ. ಬಸವರಾಜ್ ಸಮ್ಮುಖದಲ್ಲಿ ಅಭಿಯಾನ ಆರಂಭಿಸಲಾಗಿದೆ.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಪಿ.ಎನ್. ವಿರುಪಾಕ್ಷಪ್ಪ ಕಂದಾಯಾಧಿಕಾರಿ ಮಂಜುನಾಥ್, ಐಟಿ-ಇಂಜಿನಿಯರ್ ಪ್ರವೀಣ್ ಜಿ. ಕೆ., ಕಂದಾಯ ನಿರೀಕ್ಷಕ ವಿನಾಯಕ ಮತ್ತಿತರರು ಹಾಜರಿದ್ದರು.

## ಹೊನ್ನಾಳಿ : ಐಟಿಐ ಪ್ರವೇಶಕ್ಕೆ ಅರ್ಜಿ

ಹೊನ್ನಾಳಿ, ಜೂ. 5- ತಾಲ್ಲೂಕಿನ ಸುಂಕದಕಟ್ಟೆ ಗ್ರಾಮದ ಸರ್ಕಾರಿ ಐಟಿಐಗೆ ನೇರವಾಗಿ ಪ್ರವೇಶ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಎಲೆಕ್ಟ್ರೀಷಿಯನ್, ಫಿಟ್ಟರ್, ಮೆಕ್ಯಾನಿಕ್, ಎಲೆಕ್ಟ್ರಿಕ್ ವೆಹಿಕಲ್, ಅಡ್ವಾನ್ಸ್‌ಡ್ ಸಿಎನ್‌ಸಿ ಮಶಿನಿಂಗ್‌ನ ಎರಡು ವರ್ಷಗಳ ಅವಧಿಯ ಎನ್‌ಸಿವಿಟಿ ವೃತ್ತಿಗಳಿಗೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಪ್ರವೇಶ ಶುಲ್ಕ 1,200 ರೂ.ಗಳು. ವಿವರಕ್ಕೆ ಸಂಪರ್ಕಿಸಿ : 8277524964, 9611622494 ಮತ್ತು 9663588840.

## ತಂಬಾಕು ಪ್ರಕೃತಿಯಲ್ಲಿನ ಜೀವ ವೈವಿಧ್ಯಗಳಿಗೆ ಮಾರಕ



**ಮಾಗನೂರು ಬಸಪ್ಪ ಪ.ಪೂ. ಕಾಲೇಜಿನಲ್ಲಿ 'ವಿಶ್ವ ತಂಬಾಕು ರಹಿತ ದಿನ' ಆಚರಣೆ ಕಾರ್ಯಕ್ರಮದಲ್ಲಿ ಮಮತಾ**

ದಾವಣಗೆರೆ, ಜೂ.5- 31- ಭಾರತದಲ್ಲಿ ತಂಬಾಕು ಉತ್ಪನ್ನಗಳ ಸೇವನೆಯಿಂದಾಗಿ ವರ್ಷಕ್ಕೆ 10 ಲಕ್ಷ ಜನರು ಮಾರಣಾಂತಿಕ ಕಾಯಿಲೆಗಳಿಗೆ ಬಲಿಯಾಗುತ್ತಿದ್ದಾರೆ. ಇದಕ್ಕೆ ಭಾರತ ಸರ್ಕಾರ ಒಂದು ಲಕ್ಷದ ನಾಲ್ಕು ಸಾವಿರದ ಐದುನೂರು ಕೋಟಿ ರೂಪಾಯಿಗಳನ್ನು ಚಿಕಿತ್ಸಾ ವೆಚ್ಚವಾಗಿ ಖರ್ಚು ಮಾಡುತ್ತಿದೆ. ತಂಬಾಕು ಕೇವಲ ಸೇವನೆ ಮಾಡುವವರಿಗೆ ಅಷ್ಟೇ ಅಲ್ಲದೆ, ಪ್ರಕೃತಿಯಲ್ಲಿನ ಅನೇಕ ಜೀವ ವೈವಿಧ್ಯಗಳಿಗೂ ಮಾರಕವಾಗಿದೆ ಎಂದು ಜೀವಶಾಸ್ತ್ರ ಉಪನ್ಯಾಸಕರಾದ ಆರ್. ಮಮತಾ ತಿಳಿಸಿದರು.

ನಗರದ ಮಾಗನೂರು ಬಸಪ್ಪ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ವಿಶ್ವ ತಂಬಾಕು ರಹಿತ ದಿನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷರೂ, ಕಾಲೇಜಿನ ಪ್ರಾಚಾರ್ಯರೂ ಆದ ಡಾ.ಪ್ರಸಾದ್ ಬಂಗೇರಾ ಎಸ್. ಮಾತನಾಡಿ, ತಂಬಾಕು ಉತ್ಪನ್ನಗಳಿಂದ ಉಪಯೋಗವೂ ಇದೆ, ಹಾನಿಯೂ ಇದೆ. ಎಲ್ಲೆಲ್ಲಿ ತಂಬಾಕು ಉತ್ಪನ್ನಗಳಿಂದ ಹಾನಿ ಉಂಟಾಗುವುದೋ ಆ ಕಡೆಗಳಲ್ಲಿ ತಂಬಾಕು ಉತ್ಪನ್ನಗಳನ್ನು ಬಳಸದಂತೆ ಸರ್ಕಾರ ನೋಡಿಕೊಳ್ಳಬೇಕು. ಅದು ಸರ್ಕಾರದ ಕರ್ತವ್ಯ ಎಂದು ಹೇಳಿದರು.

ಕಾಲೇಜಿನ ಇಕೋ ಕ್ಲಬ್‌ನ ಸಂಯೋಜಕರೂ, ಜೀವಶಾಸ್ತ್ರ ಉಪನ್ಯಾಸಕ ಎಸ್.ಆರ್. ಸಿದ್ದೇಶ್, ಡಾ. ಬಿ.ವಿ. ರವಿಶಂಕರ್ ಉಪಸ್ಥಿತರಿದ್ದರು.

ವಿಶ್ವ ತಂಬಾಕು ರಹಿತ ದಿನ ಆಚರಣೆಯ ಸಂದರ್ಭದಲ್ಲಿ ಮಾಗನೂರು ಬಸಪ್ಪ ಪದವಿ ಪೂರ್ವ ಕಾಲೇಜಿನ ವತಿಯಿಂದ ತಂಬಾಕು ಉತ್ಪನ್ನಗಳನ್ನು ಸಾರ್ವಜನಿಕರಿಗೆ ಸರಬರಾಜು ಮಾಡದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡುತ್ತಾ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಜಿಲ್ಲಾಧಿಕಾರಿಗಳವರ ಮುಖಾಂತರವಾಗಿ ಮನವಿ ಪತ್ರ ಸಲ್ಲಿಸಲು ತೀರ್ಮಾನಿಸಲಾಯಿತು.

ಜೀವಶಾಸ್ತ್ರ ಉಪನ್ಯಾಸಕರಾದ ಕು. ಮಹಾ ಲಕ್ಷ್ಮಿ ಸ್ವಾಗತಿಸಿದರು. ಕನ್ನಡ ಉಪನ್ಯಾಸಕ ಜೆ.ಆರ್. ಯಶವಂತ ವಂದಿಸಿದರು. ಆಂಗ್ಲಭಾಷಾ ಉಪನ್ಯಾಸಕರಾದ ಸುರೇಖಾ ಜಗದೀಶ್ ನಿರೂಪಿಸಿದರು.

## ಸಮಾಜ ಸೇವೆಯಿಂದ ಶಾಶ್ವತ ಸುಖ ಸಾಧ್ಯ




ದಾವಣಗೆರೆ, ಜೂ.5- ಒತ್ತಡ ನಿವಾರಣೆಗಾಗಿ ಪ್ರವಾಸ, ಪಾರ್ಟಿ, ಎಂಜಾಯ್ ಮಾಡುವುದರಿಂದ ಸಿಗುವುದು ಕ್ಷಣಿಕ ಸುಖ ಮಾತ್ರ. ಜೀವನದಲ್ಲಿ ಸಮಾಜ ಸೇವೆ ಮಾಡುವುದರಿಂದ ನಿತ್ಯ ಮತ್ತು ಶಾಶ್ವತ ಸುಖ ಸಿಗಲು ಸಾಧ್ಯ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.

ದಾವಣಗೆರೆ ತಾಲ್ಲೂಕು ತುರ್ಚಘಟ್ಟ ಗ್ರಾಮದ ಸಾಧನ ವೃದ್ಧಾಶ್ರಮ ಮತ್ತು ಅನಾಥಾಶ್ರಮದಲ್ಲಿ ಮಾತೃದೇವೋ ಸಮಾಜ ಕಲ್ಯಾಣ ಮತ್ತು ಶೈಕ್ಷಣಿಕ ಚಾರಿಟಬಲ್ ಟ್ರಸ್ಟ್ ವತಿಯಿಂದ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಎಸ್.ಪಿ. ಶ್ರೀನಿವಾಸ್ ಅವರ ಜನ್ಮದಿನ ಹಾಗೂ ಟ್ರಸ್ಟ್ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಬಡವರು, ನೊಂದವರು, ಶೋಷಿತರು, ವಿಶೇಷ ಚೇತನರಿಗೆ ಸಹಾಯ ಹಸ್ತ ಚಾಚುವ ಮೂಲಕ ಸಮಾಜ ಸೇವೆಗೆ ಮುಂದಾದರೆ ಆತ್ಮತೃಪ್ತಿ ಲಭಿಸುತ್ತದೆ ಎಂದರು.

ಮಹಾನಗರ ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ, ಬಿಜೆಪಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ್, ಬಯಲು ಸೀಮೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಣಬೇರು ಜೀವನಮೂರ್ತಿ, ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷೆ ಕೆ.ಆರ್. ಜಯಶೀಲಾ, ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್, ನಗರ ಪಾಲಿಕೆ ಸದಸ್ಯೆ ವೀಣಾ ನಂಜಪ್ಪ, ಸಾಧನ ವೃದ್ಧಾಶ್ರಮ ಮತ್ತು ಅನಾಥಾಶ್ರಮದ ಮುಖ್ಯಸ್ಥರಾದ ಪುಷ್ಪಲತಾ ಪವಿತ್ರರಾಜ್, ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಓಬಿಸಿ ಮೋರ್ಚಾ ಅಧ್ಯಕ್ಷ ಅಡಾಣಿ ಸಿದ್ಧಪ್ಪ, ಬಿಜೆಪಿ ಮುಖಂಡರಾದ ಎಲ್.ಎನ್. ಕಲ್ಲೇಶ್, ಟ್ರಸ್ಟ್ ಕಾರ್ಯದರ್ಶಿ ಪರಶುರಾಮ್ ಸೇರಿದಂತೆ ಟ್ರಸ್ಟ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಎನ್‌ಎಸ್ ಯುಐ ಮುಖಂಡರ ಬಿಡುಗಡೆಗೆ ಮನವಿ



ದಾವಣಗೆರೆ, ಜೂ.5- ಎನ್‌ಎಸ್‌ಯುಐ ಸಂಘಟನೆಯ ವಿದ್ಯಾರ್ಥಿ ಮುಖಂಡರನ್ನು ಬಂಧಿಸಿರುವುದನ್ನು ಖಂಡಿಸಿರುವ ದಾವಣಗೆರೆ ದಕ್ಷಿಣ ನಗರ ಯುವ ಕಾಂಗ್ರೆಸ್ ಸಮಿತಿಯು, ವಿದ್ಯಾರ್ಥಿ ಮುಖಂಡರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿ, ಇಲ್ಲಿನ ಜಿಲ್ಲಾಡಳಿತದ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಿತು.

ಜೂ.1,2022 ರಂದು ಶಿಕ್ಷಣ ಸಚಿವ ನಾಗೇಶ್ ಅವರ ತಿಪಟೂರಿನ ನಿವಾಸದ ಮುಂದೆ ಎನ್.ಎಸ್.ಯು.ಐ ಮುಖಂಡರು ಹಾಗೂ ಕಾರ್ಯಕರ್ತರು ಸಾಂಕೇತಿಕ ಪ್ರತಿಭಟನೆ ಮಾಡುತ್ತಿದ್ದಾಗ, ಅವರನ್ನು ರಾಜ್ಯ ಸರ್ಕಾರ ಮನೆಗೆ ಬೆಂಕಿ ಇಡಲು ಬಂದಿದ್ದಾರೆ ಎಂಬ ನೆಪವೊಡ್ಡಿ ಬಂಧಿಸಿ, 2 ದಿನಗಳು ಕಳೆದಿವೆ. ಅವರಲ್ಲಿ ಪ್ರಮುಖರಾದ ಎನ್.ಎಸ್.ಯು.ಐ ರಾಜ್ಯಾಧ್ಯಕ್ಷ ಕೀರ್ತಿ ಗಣೇಶ್, ದಾವಣಗೆರೆಯ ಜಿಲ್ಲಾಧ್ಯಕ್ಷ ಅಲಿ ರೆಹಮತ್ ಪೈಲ್ವಾನ್ ಸೇರಿದಂತೆ 15 ಜನ ಕಾರ್ಯಕರ್ತರನ್ನು ಬಂಧಿಸಿ, ತುಮಕೂರಿನ ಕಾರಾಗೃಹದಲ್ಲಿ ಇಟ್ಟಿರುವುದು ಖಂಡನೀಯ ಎಂದು ಸಮಿತಿ ಪದಾಧಿಕಾರಿಗಳು ಅಸಮಾಧಾನ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳ ನೋವು, ತೊಂದರೆಗಳಲ್ಲಿ ಸದಾ ಮುಂದೆ ನಿಲ್ಲುವ ಎನ್.ಎಸ್.ಯು.ಐ ಸಂಘಟನೆಯನ್ನು ಕಟ್ಟಿ ಹಾಕಲು ಸರ್ಕಾರ ಪ್ರಯತ್ನಿಸುತ್ತಿದ್ದು, ವಿದ್ಯಾರ್ಥಿಗಳಿಗೆ ಉನ್ನತ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ವಿಫಲವಾದ ಸರ್ಕಾರ ಮುಂದೆ ಪ್ರಶ್ನೆ ಮಾಡುವ ಹಕ್ಕನ್ನು ಸಹಿತ ಕಸಿದುಕೊಳ್ಳುವ ಪ್ರಯತ್ನ ಮಾಡುತ್ತಿದೆ. ಈ ಮೂಲಕ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಲಾಗುತ್ತಿದೆ ಎಂದು ಆಕ್ಷೇಪಿಸಿದರು.

ಈ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷ ಸೈಯದ್ ಇರ್ಫಾನ್ ಅಹ್ಮದ್, ಇಬ್ರಾಹಿಂ ಖಲೀಲ್ ಉಲ್ಲಾ, ಆರ್. ಚಿರಂಜೀವಿ, ಸಮೀರ್, ಉಮ್ಮೇ ಹಬೀಬ, ಎಲ್ ಎಂಹೆಚ್ ಸಾಗರ್ ಸೇರಿದಂತೆ ಇತರರು ಇದ್ದರು.

## ಬಸವ ಬಳಗದ ವಸತಿ ನಿಲಯಕ್ಕೆ ಅರ್ಜಿ

ದಾವಣಗೆರೆ, ಜೂ.5- ಸರಸ್ವತಿ ನಗರದ ಬಸವ ಬಳಗದ ಪ್ರಸಾದ ಮತ್ತು ವಸತಿ ನಿಲಯದಲ್ಲಿರುವ ವಿದ್ಯಾರ್ಥಿನಿಯರ ಪ್ರಸಾದ ನಿಲಯ (ಹಾಸ್ಟೆಲ್) ದ ಪ್ರವೇಶವು ಪ್ರಾರಂಭವಾಗಿದ್ದು, ಆಸಕ್ತ ವಿದ್ಯಾರ್ಥಿನಿಯರು ಪ್ರಸಾದ ನಿಲಯದ ಪಾಲಕರನ್ನು ಸಂಪರ್ಕಿಸಲು ತಿಳಿಸಲಾಗಿದೆ. ದೂರವಾಣಿ ಸಂಖ್ಯೆ : 73377 37884, 98805 55916 ಗೆ ಸಂಪರ್ಕಿಸಬಹುದು.


**ಕೆಲಸಕ್ಕೆ ಬೇಕಾಗಿದ್ದಾರೆ**
ನಿರ್‌ವಿನ್ಸ್ ಕೆಫೆಯಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ. ವಯಸ್ಸು - 18 ರಿಂದ 30 ಬೇಕರಿಯಲ್ಲಿ ಕೆಲಸ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ, ಪಿಯುಸಿ ಪಾಸ್ / ಫೇಲ್ ಸ್ಥಳ :ಆಂಜನೇಯ ಬಡಾವಣೆ, ದಾವಣಗೆರೆ. ಹೆಚ್ಚಿನ ಮಾಹಿತಿಗಾಗಿ
93804 69079

**ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ**
ಸುಸಜ್ಜಿತವಾದ ವಾಣಿಜ್ಯ ಮಳಿಗೆ 1ನೇ ಮಹಡಿ ಬ್ಯಾಂಕ್ ಹಾಗೂ ಎಲ್ಲಾ ರೀತಿಯ ವ್ಯಾಪಾರಗಳಿಗೆ, ಶೋ ರೂಂಗೆ ಯೋಗ್ಯವಾದ 4503 ಅಡಿಗಳು ಹಾಗೂ 3250 ಅಡಿಗಳುಳ್ಳ ಸೆಲ್ಲರ್ ಬಾಡಿಗೆಗೆ ಇದೆ. ಹದಡಿ ಮುಖ್ಯರಸ್ತೆ, ಟಿ.ವಿ.ಎಸ್. ಶೋ ರೂಂ ಪಕ್ಕ, ಉದಯ ಮಾರ್ಟ್ (ವಾಣಿ ರೈಸ್ ಮಿಲ್) ಎದುರು, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ.
84959 91223, 96205 95579

**ಕಮರ್ಷಿಯಲ್ ಸೈಟು ಮಾರಾಟಕ್ಕಿವೆ**
ಜಯದೇವ ಸರ್ಕಲ್ ಹತ್ತಿರ ಲಾಯರ್ ರೋಡ್‌ನಲ್ಲಿ 40x50 South 60 ಅಡಿ ರೋಡ್‌ಗಿದೆ ಸೈಟು
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹಮಂಡಳಿಯಲ್ಲಿ 40x50 North, 30x40, 30x40 East ಅಕ್ಕ-ಪಕ್ಕ, 30x50 West 40 ಅಡಿ ರೋಡ್‌ಗಿದೆ. Rate : 1800/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ನಿಜಲಿಂಗಪ್ಪ ಬಡಾವಣೆಯಲ್ಲಿ 40x60 ದಕ್ಷಿಣ ಹೈಟೆಕ್ ಹಾಸ್ಪಿಟಲ್ ರಸ್ತೆ, ಸಾಯಿಬಾಬಾ ದೇವಸ್ಥಾನ ಹಿಂಭಾಗ 30x50 ಪೂರ್ವ. ಶಿವ-ಪಾರ್ವತಿ ಬಡಾವಣೆಯಲ್ಲಿ 40x60 ಪೂರ್ವ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಬೇಸಿಕ್‌ನಿಂದ ಸುಲಭವಾಗಿ ಇಂಗ್ಲಿಷ್ ಕಲಿಯಿರಿ**
100% Result Rs. 1000 Only.
ಮಿರಜ್‌ಕರ್ ಟ್ಯುಟೋರಿಯಲ್
ಎವಿಕೆ ರಸ್ತೆ, ದಾವಣಗೆರೆ.
88925 59549

**ಮನೆ ಬಾಡಿಗೆಗಿದೆ**
ಸರಸ್ವತಿ ನಗರ, ವಿನಾಯಕ ಬಡಾವಣೆ, ಡೋರ್ ನಂ. 1784/50, ಡಾಬಾ ಸ್ಟಾಪ್ ಹತ್ತಿರ, ಸಿಂಗಲ್ ಬೆಡ್ ರೂಮ್‌ವುಳ್ಳ ಸುಸಜ್ಜಿತ ಮನೆ ಬಾಡಿಗೆಗಿದೆ. ಪಾರ್ಕಿಂಗ್ ಹಾಗೂ ಬೋರ್‌ವೆಲ್ ವ್ಯವಸ್ಥೆ ಇರುತ್ತದೆ.
ಸಂಪರ್ಕಿಸಿ :
94485 33706, 82779 03294

**ಸೈಟ್ ಮಾರಾಟಕ್ಕಿದೆ**
ಸೈಜ್ 47x70, Bit of Land 60 ಅಡಿ Free ಸಿಗುತ್ತದೆ. Facing : North P.B Roadಗೆ ಲಗತ್ತಾಗಿರುತ್ತದೆ. Location : P.B Road Avaragere, Hyundai Car Showroom ಪಕ್ಕದಲ್ಲಿ ಸುತ್ತಲೂ ಕಾಂಪೌಂಡ್ ಹಾಕಿರುತ್ತದೆ. Only Genuine buyers May Contact :
91643 82998, 90082 27199

**House For Rent Long Term & Short Term Available**
With all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಲೇಡಿಸ್ ಬೇಕಾಗಿದ್ದಾರೆ. ಕಲಿಯುವವರಿಗೂ ಆದ್ಯತೆಯುಂಟು ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
M : 91108 98377

**ಬೇಕಾಗಿದ್ದಾರೆ**
ಮನೆ ಕೆಲಸ ಹಾಗೂ ಅಡುಗೆ ಮಾಡುವವರು ಬೇಕಾಗಿದ್ದಾರೆ. ಸ್ಥಳ :ಎಸ್.ಎಸ್. ಲೇಔಟ್ 'ಎ' ಬ್ಲಾಕ್ ಗುರು ಕೊಟ್ಟೂರೇಶ್ವರ ಹೋಟೆಲ್ ಹತ್ತಿರ. ಸಂಪರ್ಕಿಸಿ:
9741777567

**ಬೇಕಾಗಿದ್ದಾರೆ**
ಯಾವುದೇ ಪದವಿ ಅಥವಾ ಫ್ಯಾಷನ್ ಡಿಸೈನಿಂಗ್ ಪಾಸ್ ಅಥವಾ ಫೇಲ್ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
94834 26715, 98869 56213

**ಕೆಲಸಕ್ಕೆ ಬೇಕಾಗಿದ್ದಾರೆ**
ಎಂ.ಸಿ.ಸಿ ಬಿ ಬ್ಲಾಕ್ ನಲ್ಲಿರುವ ಆಫೀಸ್‌ನಲ್ಲಿ ಸ್ವಚ್ಛತಾ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
96634 32551

**ಸೈಟುಗಳು ಮಾರಾಟಕ್ಕಿವೆ**
30x40,30x50x40x60, ಬನಶಂಕರಿ ಬಡಾವಣೆ, ಶಿವಪಾರ್ವತಿ ಬಡಾವಣೆ, ಜೆ.ಹೆಚ್ ಪಟೇಲ್, ವಾಜಪೇಯಿ ಬಡಾವಣೆ, ಸಿದ್ದವೀರಪ್ಪ, ಎಸ್.ಎಸ್ ಬಡಾವಣೆ, ಜಯನಗರ, ಹೈಟೆಕ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ ಉತ್ತಮ ದರದಲ್ಲಿ ಸೈಟುಗಳು ದೊರೆಯುತ್ತವೆ. ಕಮರ್ಷಿಯಲ್ ಸೈಟುಗಳಿಗಾಗಿ ವಿಚಾರಿಸಿ :
ಏಜೆಂಟ್ ಅಭಿಷೇಕ್ ಅಲ್ಲೇರ್
97315 12365

**LOANS**
ALL TYPES OF LOANS
Call:
96118 66449
(except subsidy loans)

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಬಳ : 10,000/-
99161 43003, 95352 43598
Tel Ph : 08192 261003

**WORK FROM HOME**
Male/Female, Full / Part time Hand writing work. Small Letter to Capital Letter Earn Per month 12,000/- to 15,000/-
89718 52431

**WANTED**
Sale s Executive Qualification : Any Degree Contact : SBL batteries Shree Shaila Mutt Complex Vinobhanagar,3rd Main Corner P.B Road, Davanagere.
99019 08586

**2 ಬೆಡ್ ರೂಂ ಮನೆ ಬಾಡಿಗೆಗೆ**
ಡೋ.ನಂ. 240/2, 4 ನೇ ಮೇನ್, ಪಿ.ಜೆ ಬಡಾವಣೆ, ನರ್ಸರಿ ಜೈನ್ ವಿದ್ಯಾಲಯದ ಹತ್ತಿರ, ರಾಂ ಅಂಡ್ ಕೋ ಸರ್ಕಲ್ ಬಳಿ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ.
97429 61169, 81974 00298

**ಮನೆ ಮಾರಾಟಕ್ಕಿದೆ**
ವಿಳಾಸ : ಬನಶ್ರೀ ನಿಲಯ, #3683/9, 7ನೇ ಅಡ್ಡರಸ್ತೆ, ಆಂಜನೇಯ ಬಡಾವಣೆ, (BIET ಕಾಲೇಜ್ ರಸ್ತೆಯಲ್ಲಿರುವ, ಬಾಪೂಜಿ ಬ್ಯಾಂಕ್ ಪಕ್ಕದಲ್ಲಿ)
ಫೋ. : 94484 54760
ದರ : 2 ಕೋಟಿಗಳು

**ಎಸ್.ಜಿ.ಎಂ.ಟೂರ್ಸ್ (ರಿ.)**
ಪಿ.ಜೆ.ಬಡಾವಣೆ, ದಾವಣಗೆರೆ-2
ಚಾರ್‌ಧಾಮ್ ಯಾತ್ರೆ
ಪ್ರವಾಸ ದಿನಾಂಕ : Sept / Oct ಕೆಲವೇ ಸೀಟುಗಳಿವೆ. ಬುಕ್ಕಿಂಗ್ ಕೊನೆಯ ದಿನಾಂಕ 14.6.2022. ಸಂಪರ್ಕಿಸಿ
78925 10652, 80509 52637

**ಶಿಕ್ಷಕರು ಬೇಕಾಗಿದ್ದಾರೆ**
BSc., B.Ed.. M.Sc., B.Ed.. B.Sc., / M.Sc., B.PEd., / C.PEd.
ನಂದಗೋಕುಲ ಶಾಲೆ
ದೇವರಾಜ ಅರಸು ಬಡಾವಣೆ, ಸಿ ಬ್ಲಾಕ್, 6ನೇ ಕ್ರಾಸ್, ಆರ್‌ಟಿಓ ಆಫೀಸ್ ಹಿಂಭಾಗ, ಕೊಂಡಜ್ಜಿ ರಸ್ತೆ, ದಾವಣಗೆರೆ.
Ph. : 99640 17729
*ಪಾರ್ಟ್‌ಟೈಂ ಶಿಕ್ಷಕರು ಸಹ ಸಂಪರ್ಕಿಸಬಹುದು.

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
80955 09025
ಕೆಲಸ : 100% ಗ್ಯಾರಂಟಿ

**ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ**
ದಾವಣಗೆರೆ ಗಾಂಧಿ ಸರ್ಕಲ್‌ನಲ್ಲಿ ಸುಮಾರು 250 ಅಡಿ ಮಳಿಗೆ ಬಾಡಿಗೆಗೆ ದೊರೆಯುತ್ತದೆ.
ಸಂಪರ್ಕಿಸಿ :
91645 95594

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಪಾಸ್ ಅಥವಾ ಫೇಲ್, ವಯೋಮಿತಿ 15 ರಿಂದ 16, ವಿಜಯಲಕ್ಷ್ಮೀ ರಸ್ತೆ, ಗಡಿಯಾರ ಕಂಬದ ಹತ್ತಿರ ದಾವಣಗೆರೆ.
ಸಂಪರ್ಕಿಸಿ :
86609 06338, 70193 19723

**ಸೈಟುಗಳು ಮಾರಾಟಕ್ಕಿವೆ**
ಅಮರನಾಥ ಲೇಔಟ್ 40 ಅಡಿ ರಸ್ತೆಗೆ 62x88 ದಕ್ಷಿಣ ಭಾಗಕ್ಕೆ ಮತ್ತು 20x40 ಪಶ್ಚಿಮ ಭಾಗಕ್ಕೆ ಶ್ಯಾಬನೂರು ಬನಶ್ರೀ ಲೇಔಟ್ ಪಕ್ಕ ಗೀತಂ ಸ್ಕೂಲ್ ಹತ್ತಿರ 40 ಅಡಿ ರಸ್ತೆಗೆ ಪೂರ್ವಕ್ಕೆ 40x60 ನಿಜಲಿಂಗಪ್ಪ ಲೇಔಟ್ ಸೈಟ್ ನಂ. 922 ಪಶ್ಚಿಮ ಭಾಗ ಅಳತೆ 30x30
98440 84229

**ಬಾಡಿಗೆಗೆ ಇದೆ**
ಪಿ.ಜಿ ನಡೆಸಲಿಕ್ಕೆ ಅಥವಾ ವರ್ಕಿಂಗ್ ವುಮೆನ್ಸ್ ಹಾಸ್ಟೆಲ್ ನಡೆಸುವುದಕ್ಕೆ ಸೂಕ್ತ ಸ್ಥಳ ಸರಸ್ವತಿ ನಗರದ 2ನೇ ಮೇನ್ 3ನೇ ಕ್ರಾಸ್‌ನ 2ನೇ ಮಹಡಿಯಲ್ಲಿ ಖಾಲಿ ಇದೆ.
ಆಸಕ್ತರು ಸಂಪರ್ಕಿಸಿ :
97432 28827, 92412 49090

**ಲೆಕ್ಚರರ್ಸ್ ಬೇಕಾಗಿದ್ದಾರೆ**
Qualification. BE / M.Tech Civil, Mechanical, Cs Salary : 15000 - 20000
ಸಮೃದ್ಧಿ ಕೋಚಿಂಗ್ ಅಕಾಡೆಮಿ
63646 40296

**WANTED TRAINERS**
C,C++,JAVA
PART TIME & FULL TIME
PH:9739647391, 8971279127

**LADY TEACHERS WANTED**
B.Ed - 4 Posts, D.Ed - 4 Posts. Any Degree - 4 Posts
Contact : Vidya Vikas Convent
Mothi Doddappa Layout, Behind Aarykae Hospital, K.T.J Nagar, Davanagere.
M : 99866 17235

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಶನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು
Swapna Cushion Work
Behind Vittal Temple, Maharaj Pet, Davanagere
98445 81966

**TEACHERS WANTED**
Teachers (female)
Bharathi Play School, KTJ Nagar, DVG., Play group/LKG/UKG Qualification : Any Degree with Exellent English Communication with/without Experience. Share resume to below email or whatsapp
Meritrisebharathi@gmail.com
78992 70110, 78992 70118

**MBBS**
Aspirants looking for admission in Russia, with low budget, call or visit
+91 7022 321 123
www.doctorsquery.com

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಮನೆ ಮಾರಾಟಕ್ಕಿದೆ**
# 628, ಆಂಜನೇಯ ಬಡಾವಣೆ, ಎಂ.ಇ.ಎಸ್. ಕಾನ್ವೆಂಟ್ ರೋಡ್, 4ನೇ ಮೇನ್, 4ನೇ ಕ್ರಾಸ್‌ನಲ್ಲಿ 40x54, ಅಳತೆಯಲ್ಲಿ ಎರಡು ಮನೆಗಳು ಮಾರಾಟಕ್ಕಿವೆ.
97402 92935, 95918 88390

**ಶಿಕ್ಷಕರು ಬೇಕಾಗಿದ್ದಾರೆ**
ವಿಂಪಸ ಸೆಂಟ್ರಲ್ ಇಂಗ್ಲಿಷ್ ಮೀಡಿಯಂ ಸ್ಕೂಲ್ ಸಾಸ್ವೇಹಳ್ಳಿ ನಮ್ಮ ಶಾಲೆಯಲ್ಲಿ ಇಂಗ್ಲಿಷ್, ಗಣಿತ ವಿಜ್ಞಾನ ವಿಷಯಗಳನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಬೋಧನೆ ಮಾಡಲು B.Ed ವಿದ್ಯಾರ್ಹತೆಯುಳ್ಳ ಶಿಕ್ಷಕರು ತಕ್ಷಣ ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
77608 39839

**ಸಿಮೆಂಟ್ ಬ್ರಿಕ್ಸ್ ಫ್ಯಾಕ್ಟರಿ ಮಾರಾಟಕ್ಕಿದೆ**
ಸರ್ವೆ ನಂಬರ್ 134/3 ಒಂದು ಮುಕ್ಕಾಲು ಎಕರೆ ಕೈಗಾರಿಕಾ ವಲಯ (N.A) ಆಗಿದೆ. ಹೊಲ ಮಾರಾಟಕ್ಕಿದೆ. ಐಗೂರು, ದಾವಣಗೆರೆ ಜಿಲ್ಲೆ.
90365 59096, 92428 37951

## ಚಕ್ರತೀರ್ಥ ಸಮಿತಿ ವಜಾಕ್ಕೆ ಆಗ್ರಹಿಸಿ ಪ್ರತಿಭಟನೆ



ದಾವಣಗೆರೆ, ಜೂ.5- 9ನೇ ತರಗತಿಯ ಪಠ್ಯಪುಸ್ತಕದಲ್ಲಿ ಬಸವಣ್ಣನವರ ಹಾಗೂ ಶರಣ ಧರ್ಮದ ಹುಟ್ಟಿನ ಕುರಿತು ತಪ್ಪು ಮಾಹಿತಿಯನ್ನು ಕೊಟ್ಟಿರುವ ರೋಹಿತ್ ಚಕ್ರತೀರ್ಥ ಸಮಿತಿಯನ್ನು ವಜಾಗೊಳಿಸಬೇಕೆಂದು ಆಗ್ರಹಿಸಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಕಾರ್ಯಕರ್ತರು ನಂತರ ಜಿಲ್ಲಾಡಳಿತ ಭವನಕ್ಕೆ ತೆರಳಿ ಜಿಲ್ಲಾಧಿಕಾರಿ ಮುಖಾಂತರ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಯುವ ಘಟಕದ ಅಧ್ಯಕ್ಷ ಶಂಭು ಎಸ್. ಉರೇಕೊಂಡಿ, ಕೈಗಾರಿಕಾ ಸಮಿತಿ ಅಧ್ಯಕ್ಷರಾದ ಚಂದ್ರಶೇಖರ್ ಐಗೂರು, ರಾಷ್ಟ್ರೀಯ ಯುವ ಉಪಾಧ್ಯಕ್ಷ ಸಂದೀಪ್ ಅಣಬೇರು, ಪ್ರಧಾನ ಕಾರ್ಯದರ್ಶಿ ನಿಖಿಲ್ ಕೊಂಡಜ್ಜಿ, ಬಸವರಾಜ್, ಎಸ್. ರತನ್, ಶಿವರಾಜ್, ಬಸವರಾಜ್ ಎಡಗಾರ್, ಬಿ.ಜಿ. ರಮೇಶ್, ಕರಿಶಿವಪ್ಪ ಸಿದ್ದೇಶ್, ಆರ್.ಜಿ. ಸಚಿನ್ ಮತ್ತಿತರರು ಇದ್ದರು.

## ಸಾವಿಲ್ಲದ ಸಾಧನೆ ಮಾಡಿದಾಗ ಸದಾ ನೆನಪಿನಲ್ಲಿ ಉಳಿಯಲು ಸಾಧ್ಯ

ಚಿತ್ರದುರ್ಗ, ಜೂ.5- ಜನನ ಮತ್ತು ಮರಣದ ಮಧ್ಯೆ ಸಾಧನೆ ಮಾಡಿದವರೇ ಸತ್ಪುರುಷರು. ಅವರು ಮಾಡಿದ ಸಾಧನೆ ಸಾಯುವುದಿಲ್ಲ. ಮಾನವ ಜೀವನ ಅತ್ಯಂತ ರಹಸ್ಯ. ಸಾವು ಇಲ್ಲದ ಸಾಧನೆಯನ್ನು ಮಾಡಿದಾಗ ಸದಾ ನೆನಪಿನಲ್ಲಿ ಉಳಿಯಲು ಸಾಧ್ಯ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಪಟ್ಟರು.

ಚಿತ್ರದುರ್ಗ ತಾಲ್ಲೂಕು ಗೊಡಬನಹಾಳ್‌ನ ಕಲ್ಲೇಶ್ವರ ಕಲ್ಯಾಣ ಮಂಟಪದಲ್ಲಿ ನಡೆದ ಎಂ.ಜಿ. ದೊರೆಸ್ವಾಮಿ ಸ್ಮರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶರಣರು ಆಶೀರ್ವಚನ ನೀಡಿದರು.

ಗೌತಮ ಬುದ್ಧರ ಒಂದು ಸಂದೇಶವೆಂದರೆ, ಮರಣ ಅತ್ಯಂತ ಸ್ವಾಭಾವಿಕ; ಜನನ ಅಸ್ವಾಭಾವಿಕ. ಬಸವಣ್ಣನವರು, 'ನೀ ಹುಟ್ಟಿಸಿದಲ್ಲಿ ಹುಟ್ಟಿ ನೀ ಕೊಂದಲ್ಲಿ ಸಾಯದೆ ಎನ್ನ ವಶವೇ ಅಯ್ಯಾ' ಎಂದಿದ್ದಾರೆ. ಸಾವು ಯಾವ ಗಳಿಗೆಯಲ್ಲಿ ಬರುತ್ತದೆ ಎಂಬುದು ಗೊತ್ತಿಲ್ಲ. ಸಾವು ಎಂಬುದು ಗಾಳಿಗಿಟ್ಟ ದೀಪದಂತೆ. ದೇವಸ್ಥಾನ, ಚರ್ಚ್, ಮನೆಗಳಲ್ಲಿ ಹಚ್ಚುವ ದೀಪ ನಂದುವುದು ಅಪರೂಪ. ಆದರೆ ಗಾಳಿಗಿಟ್ಟ ದೀಪ ಒತ್ತಡಕ್ಕೆ ಸಿಲುಕಿ ಕೆಡುತ್ತದೆ. ಸಾಯುವ ಮುನ್ನ ಸಮಾಜ ಮತ್ತು ಕುಟುಂಬಕ್ಕೆ ಏನು ಕೊಡುಗೆ ಕೊಟ್ಟಿದ್ದೇವೆ ಎಂಬುದು ಮುಖ್ಯವಾಗುತ್ತದೆ



ಎಂದು ನುಡಿದರು.

ದೊರೆಸ್ವಾಮಿ ಅವರು ಎನ್‌ಜಿಓ ಮುಖಾಂತರ ಸಾಧನೆ ಮಾಡುತ್ತಾ ಬಂದವರಾಗಿದ್ದರು. ಅವರು ಸೇವೆಯ ಸ್ವರೂಪವನ್ನು ಕಟ್ಟಿಕೊಂಡು ನಡೆದವರಾಗಿದ್ದಾರೆ. ದೊರೆಸ್ವಾಮಿ ಮತ್ತು ಪರಮಶಿವಯ್ಯನವರು ಸೇರಿ ಕೊರೊನಾ ಸಮಯದಲ್ಲಿ ಮೂರೂವರೆ ಲಕ್ಷ ಜನರಿಗೆ ಸೇವೆ ಸಲ್ಲಿಸಿದವರಾಗಿದ್ದಾರೆ. ಕೊರೊನಾ ಸಂದರ್ಭದಲ್ಲಿ ಖಿನ್ನತೆಗೆ ಒಳಗಾಗಿ ಸರಿಯಾದ ಸಮಯದಲ್ಲಿ ಚಿಕಿತ್ಸೆ ಫಲಿಸದೆ ಅಕಾಲಿಕ ಮರಣಕ್ಕೆ ತುತ್ತಾದರು. ಎಲ್ಲವನ್ನು ಸಮ ಮಾಡುವುದು ಮರಣ. ಹಾಗಾಗಿ ಸಾವು ಬರುವವರೆಗೂ ಸಾಧನೆಯನ್ನು ಮಾಡೋಣ ಎಂದರು.

ರೆವರೆಂಡ್ ಫಾದರ್ ಎಂ.ಎಸ್. ರಾಜು ಮಾತನಾಡಿ, ಸಮಾಜದಲ್ಲಿ ಕುಟುಂಬ ಪರಿಸರ ಮುಖ್ಯ. ಅದರಲ್ಲೂ ತಾಯಿ ಪ್ರಾಮುಖ್ಯತೆ ವಹಿಸುತ್ತಾರೆ. ಸಮಾಜ ಸೇವೆ ಮಾಡುವಂತಹ ಗುಣ ಕಲಿಸುವಂಥವಳು ತಾಯಿ. ಅಂತಹ ತಾಯಿಯನ್ನು ದೊರೆಸ್ವಾಮಿ ಮತ್ತು ಅವರ ಕುಟುಂಬದವರು ಹೊಂದಿರುವುದರಿಂದ ಅವರಿಂದ ಸಮಾಜಮುಖಿ ಕಾರ್ಯಗಳನ್ನು ಕಾಣುತ್ತಿದ್ದೇವೆ ಎಂದು ಹೇಳಿದರು.

ಶ್ರೀ ಬಸವನಾಗಿದೇವ ಸ್ವಾಮೀಜಿ ಆಶೀರ್ವಚನ ನೀಡಿದರು. ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿ, ಕೆ. ಶಿವಕುಮಾರ್ ಮಾತನಾಡಿದರು.

ದಾವಣಗೆರೆ ವಿರಕ್ತಮಠದ ಶ್ರೀ ಬಸವ ಪ್ರಭು ಸ್ವಾಮೀಜಿ, ಹಾವೇರಿ ಹೊಸಮಠದ ಶ್ರೀ ಬಸವ ಶಾಂತಲಿಂಗ ಸ್ವಾಮೀಜಿ, ತಿಳುವಳ್ಳಿಯ ಶ್ರೀ ಬಸವ ನಿರಂಜನ ಸ್ವಾಮೀಜಿ, ಎಸ್.ಜೆ.ಎಂ. ವಿದ್ಯಾಪೀಠದ ಜಂಟಿ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯದ ಡೀನ್ ಡಾ|| ಪ್ರಶಾಂತ್, ಡಾ|| ನಾರಾಯಣಮೂರ್ತಿ, ಡಾ|| ಪಾಲಾಕ್ಷಯ್ಯ, ಎಸ್.ಜೆ.ಎಂ. ದಂತ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ|| ಗೌರಮ್ಮ, ಕೆ.ಎಂ. ವೀರೇಶ್, ಕೆಇಬಿ ಷಣ್ಮುಖಪ್ಪ, ಎಂ.ಟಿ. ಮಲ್ಲಿಕಾರ್ಜುನ ಸ್ವಾಮಿ, ಶ್ರೀಮತಿ ಮೀರಾ ನಾಡಿಗ್, ಡಾ|| ಗೌರವ್ ಎಂ.ಡಿ., ಘನಲಿಂಗ ಶಾಸ್ತ್ರಿಗಳು, ಘನದೇವ ಶಾಸ್ತ್ರಿಗಳು, ಮಂಡಿ ಶಿವಣ್ಣ ಮತ್ತಿತರರು ಭಾಗವಹಿಸಿದ್ದರು.

ತೋಟಪ್ಪ ಉತ್ತಂಗಿ ಪ್ರಾರ್ಥಿಸಿದರು. ಎಂ.ಜಿ. ಮಲ್ಲಿಕಾರ್ಜುನಸ್ವಾಮಿ ಸ್ವಾಗತಿಸಿದರು. ಶ್ರೀಮತಿ ಶೋಭಾ ಮಲ್ಲಿಕಾರ್ಜುನ್ ನಿರೂಪಿಸಿದರು. ಶ್ರೀಮತಿ ಜಯಶ್ರೀ ಆನಂದ್ ವಂದಿಸಿದರು.

## ವಿದೇಶಾಂಗ ವ್ಯವಹಾರಗಳ ವಿಷಯದಲ್ಲಿ ಅವಿನಾಶ್ ಸೇವೆ ಆಯ್ಕೆ ಶ್ಲ್ಯಾಘನೀಯ



**ಅವಿನಾಶ್ ಅವರಿಗೆ ಜಿಲ್ಲಾ ಬ್ರಾಹ್ಮಣ ಸಂಘದ ಅಭಿನಂದನಾ ಸಮಾರಂಭದಲ್ಲಿ ಹೆಚ್.ಬಿ. ಮಂಜುನಾಥ್**

ದಾವಣಗೆರೆ, ಜೂ. 5- ವಿದೇಶಾಂಗ ವ್ಯವಹಾರಗಳ ವಿಷಯದಲ್ಲಿ ತಮ್ಮ ಸೇವೆಯನ್ನು ಆಯ್ಕೆ ಮಾಡಿಕೊಂಡಿರುವ ಅವಿನಾಶ್, ಈ ಸ್ಥಾನದಲ್ಲಿ ನಮ್ಮ ಹಾಗು ಇತರೆ ದೇಶಗಳ ಸಂಬಂಧ, ವ್ಯವಹಾರ, ಅಲ್ಲಿರುವ ನಮ್ಮ ಪ್ರಜೆಗಳ ಯೋಗಕ್ಷೇಮದಿಂದ ಹಿಡಿದು ಆಯಾ ದೇಶಗಳ ಜೊತೆ ಉತ್ತಮ ಬಾಂಧವ್ಯ ಹೊಂದುವಂತೆ ಮಾಡುವ ಕೆಲಸ ಈ ಕ್ಷೇತ್ರದ ವಿಶೇಷತೆ. ಇದನ್ನು ವಿಶೇಷವಾಗಿ ಆಯ್ಕೆ ಮಾಡಿಕೊಂಡಿರುವ ಅವಿನಾಶ್ ಬಗ್ಗೆ ಚಿಂತಕ ಹೆಚ್.ಬಿ. ಮಂಜುನಾಥ್ ಅಭಿಮಾನದ ಮಾತುಗಳನ್ನಾಡಿದರು.

ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಶಿಕ್ಷಣ ತಜ್ಞ ಎಸ್.ಜೆ. ಶ್ರೀಧರ್ ಮಾತನಾಡಿ, ಯಾವುದೇ ಸಾಧನೆಗೆ ವಿಷಯದ ಬಗ್ಗೆ ಅರಿವು ಇರುವುದು ಉತ್ತಮ. ಆ ಅರಿವೇ ಗುರುವಾಗಿ ನಮ್ಮನ್ನು ಗುರಿಯ ಕಡೆ ತಲುಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದರು.

ತಮ್ಮ ಮೊಮ್ಮಗನ ಸಾಧನೆ ಬಗ್ಗೆ ಆನಂದರಾವ್ ಮಾತನಾಡಿದರು. ನಂತರ ಸಮಾಜದ ವತಿಯಿಂದ ಯುಪಿಎಸ್‌ಸಿ ಪರೀಕ್ಷೆಯಲ್ಲಿ ದೇಶಕ್ಕೆ 31 ನೇ ಸ್ಥಾನ ಹಾಗು ರಾಜ್ಯಕ್ಕೆ ಮೊದಲ ಸ್ಥಾನ ಗಳಿಸಿದ ಅವಿನಾಶ್ ವಿ. ರಾವ್ ಅವರನ್ನು ಸನ್ಮಾನಿಸಿ, ಅಭಿನಂದನಾ ಪತ್ರ ನೀಡಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಅವಿನಾಶ್, ತಾವು ನಡೆಸಿದ ತಯಾರಿ ಬಗ್ಗೆ ಹಾಗು ತಮಗೆ ಆದ ಅನುಭವಗಳ ಬಗ್ಗೆ ಮಾತನಾಡಿದರು. ಅವರಿಗೆ ಈ ಸೇವಾ ಕ್ಷೇತ್ರಕ್ಕೆ ಬರಲು ಯಾವ ವಿಷಯಗಳು ಪ್ರೇರೇಪಿಸಿದವು ಹಾಗು ಈ ಕ್ಷೇತ್ರದಲ್ಲಿ ಇನ್ನೂ ಉನ್ನತ ಸ್ಥಾನ ಪಡೆದು, ಭಾರತ ಹಾಗು ರಾಜ್ಯಕ್ಕೆ ತಮ್ಮ ಕೈಲಾದ ಸೇವೆ ಮಾಡುವ ಆಸೆಯ ಬಗ್ಗೆಯೂ ಮಾತನಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಅಧ್ಯಕ್ಷ ಬಿ.ಟಿ ಅಚ್ಯುತ್ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಕಾರ್ಯದರ್ಶಿ ಮಾಧವ ಪದಕಿ, ಅವಿನಾಶ್ ತಂದೆ ವಿಠ್ಠಲ ರಾವ್, ತಾಯಿ ಶ್ರೀಮತಿ ಸ್ಮಿತಾ ವಿಠ್ಠಲ್ ಹಾಗು ಶ್ರೀಮತಿ ಸುಮಾ, ರಾಮನಾಥ ಪಿ.ಸಿ, ಮತ್ತಿತರೆ ಗಣ್ಯರು ಉಪಸ್ಥಿತರಿದ್ದರು.

ಶ್ರೀಮತಿ ಸಾವಿತ್ರಮ್ಮ ಶಾಸ್ತ್ರಿ ಪ್ರಾರ್ಥಿಸಿದರು. ಬಾಲಕೃಷ್ಣ ವೈದ್ಯ ಸ್ವಾಗತಿಸಿದರು. ಚನ್ನಗಿರಿ ಬ್ರಾಹ್ಮಣ ಸಮಾಜದ ಕಾರ್ಯದರ್ಶಿಗಳಾದ ಸುಬ್ರಹ್ಮಣ್ಯ ಅಭಿನಂದನಾ ಪತ್ರ ಓದಿದರು. ಜಿಲ್ಲಾ ಯುವ ವೇದಿಕೆಯ ಕಾರ್ಯದರ್ಶಿ ಅನಿಲ್ ಬಾರೆಂಗಳ್ ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಸಂಘದ ಖಜಾಂಚಿ ಡಾ. ಶಶಿಕಾಂತ್ ವಂದಿಸಿದರು.

## ಸಂಸ್ಕಾರಭರಿತ ಶಿಕ್ಷಣದಿಂದ ಸಂಪೂರ್ಣ ವ್ಯಕ್ತಿತ್ವದ ಬೆಳವಣಿಗೆ

**ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಅಕ್ಷರಾಭ್ಯಾಸ ಕಾರ್ಯಕ್ರಮದಲ್ಲಿ ಚೈತನ್ಯ ಮಾತಾಜಿ**

ದಾವಣಗೆರೆ,ಜೂ.5- ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಕಳೆದ ಜೂನ್ 1ರ ಬುಧವಾರ ಅಕ್ಷರಾಭ್ಯಾಸ ಮತ್ತು ವಿದ್ಯಾರಂಭ ಕಾರ್ಯಕ್ರಮವು ಪುಷ್ಪಾರ್ಚನೆ ಯೊಂದಿಗೆ ಆರಂಭ ವಾಯಿತು.



ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಅಮೃತಾನಂದ ಮಯಿ ಆಶ್ರಮದ ಚೈತನ್ಯ ಮಾತಾಜಿ ಅವರು ಶಾಲೆಯ ಮಕ್ಕಳಿಗೆ ಅಕ್ಷರಾಭ್ಯಾಸವನ್ನು ಮಾಡಿಸುವುದರ ಮೂಲಕ, ಸಂಸ್ಕಾರಭರಿತ ವಿದ್ಯೆಯ ಮಹತ್ವ, ಮುಗ್ಧ ಮನಸ್ಸಿನ ಮಕ್ಕಳ ಭಾವನೆ, ಪವಿತ್ರ ಶಿಕ್ಷಣದ ಸಾರ್ಥಕತೆ, ಪ್ರಕೃತಿ-ಮನುಷ್ಯನ ನಡುವಿನ ಸಹಸಂಬಂಧ, ನಿಸ್ವಾರ್ಥ ಸೇವೆಯ ಪ್ರಜ್ಞೆಯನ್ನು ತಿಳಿಸಿದರು. ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಸಮಾಜಮುಖಿ ಸಾಧನೆ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ಸಂಸ್ಥೆಯ ಕಾರ್ಯದರ್ಶಿ ಜಯಣ್ಣ, ಪ್ರಾಸ್ತಾವಿಕ ಭಾಷಣ ಮಾಡಿ, ಮಗುವಿನ ಪ್ರಾರಂಭಿಕ ಶಿಕ್ಷಣಕ್ಕೆ ಬುನಾದಿ ಆಗಿರುವ ಹಾಗೂ ಷೋಡಷ ಸಂಸ್ಕಾರಗಳಲ್ಲಿ ಒಂದಾದ ಅಕ್ಷರಾಭ್ಯಾಸ ಕಾರ್ಯಕ್ರಮದ ಮಹತ್ವವನ್ನು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹಿರಿಯ ಪತ್ರಕರ್ತ ಸದಾನಂದ ಹೆಗಡೆ ಮಾತನಾಡಿ, ವರ್ಷದ ಪ್ರಾರಂಭದಲ್ಲಿನ ಮಳೆಯ ಆಗಮನ ಹಾಗೂ ಅಕ್ಷರ ಜ್ಞಾನದ ಮಹತ್ವವನ್ನು ತಿಳಿಸುತ್ತಾ, ಶಾಲೆಯ ಜೊತೆಗೆ ಪಾಲಕ-ಪೋಷಕರು ಓದು-ಬರಹ ಗಾರರು ಆಗಿದ್ದಾಗ ವಿದ್ಯಾರ್ಥಿಗಳ ಸರ್ವಾಂಗೀಣ ಶಿಕ್ಷಣ ಪರಿಪೂರ್ಣವಾಗುತ್ತದೆ ಎಂದು ತಿಳಿಸಿದರು.

ಸಂಸ್ಥೆಯ ಸಂಚಾಲಕ ಶಂಭುಲಿಂಗಪ್ಪ, ಸದಸ್ಯರಾದ ವಿನಾಯಕ ರಾನಡೆ, ಪ್ರಾಂಶುಪಾಲ ಮಂಜುನಾಥ, ಶೈಕ್ಷಣಿಕ ಸಂಯೋಜಕ ಶಿವರಾಜ್ ಮತ್ತಿತರರು ಉಪಸ್ಥಿತರಿದ್ದರು.

ಆಚಾರ್ಯ ಶ್ರೀ ಚಿದಂಬರ ಭಟ್ಟರಿಂದ ಸರಸ್ವತಿ ಪೂಜಾ ಕೈಂಕರ್ಯ ಹಾಗೂ ಸಂಕಲ್ಪ ಕಾರ್ಯ ಜರುಗಿತು. ಶ್ರೀಮತಿ ವರದಾ ನಿರೂಪಿಸಿದರು. ಶ್ರೀಮತಿ ಶೋಭ ಪ್ರಾರ್ಥಿಸಿದರು. ಶ್ರೀಮತಿ ವೀಣಾ ಸ್ವಾಗತಿಸಿದರು.

## ಸರ್ಕಾರಿ ಐಟಿಐಗೆ ಅರ್ಜಿ

ದಾವಣಗೆರೆ, ಜೂ. 5-ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯು ಆಫ್‌ಲೈನ್ ಮುಖಾಂತರ ಉದ್ಯೋಗ ಯೋಜನೆಯಡಿಯಲ್ಲಿ (ಟಿಟಿಎಲ್) ಬರುವ ವೃತ್ತಿಗಳು-6, ಅನ್‌ಪಾಪ್ಯುಲರ್-21 ವೃತ್ತಿಗಳು ಮತ್ತು ಪಾಪ್ಯುಲರ್-16 ವೃತ್ತಿಗಳ ಪ್ರವೇಶ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಲಾಗಿದೆ. ಈ ಸಂಸ್ಥೆಯಲ್ಲಿ ನಾಳೆ ದಿನಾಂಕ 6 ರವರೆಗೆ ಅರ್ಜಿಗಳನ್ನು ವಿತರಿಸಲಾಗುವುದು ಮತ್ತು ಸ್ವೀಕರಿಸಲಾಗುವುದು.


## ಆಮ್ ಆದ್ಮಿ ಪಕ್ಷಕ್ಕೆ ನೂತನ ಪದಾಧಿಕಾರಿಗಳ ನೇಮಕ

ದಾವಣಗೆರೆ, ಜೂ.5- ಆಮ್ ಆದ್ಮಿ ಪಾರ್ಟಿಯ ಜಿಲ್ಲಾ ಸಮಿತಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಿರುವುದಾಗಿ ಜಿಲ್ಲಾಧ್ಯಕ್ಷ ಕೆ.ಎಲ್. ರಾಘವೇಂದ್ರ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಆದಿಲ್ ಖಾನ್ ಎಸ್.ಕೆ., ಜಿಲ್ಲಾ ಅಲ್ಪಸಂಖ್ಯಾತ ಅಧ್ಯಕ್ಷರು ಹಾಗೂ ದಾವಣಗೆರೆ ದಕ್ಷಿಣದ ಅಧ್ಯಕ್ಷರಾಗಿ ಸಮೀರ್ ಹಸನ್ ಅವರನ್ನು ಆಯ್ಕೆ ಮಾಡಲಾಗಿದೆ.

ಜಿಲ್ಲಾ ಸಂಘಟನಾ ಕಾರ್ಯದರ್ಶಿಗಳಾಗಿ ಕೆ. ರವೀಂದ್ರ, ಉಪಾಧ್ಯಕ್ಷರಾಗಿ ಶಶಿಧರ್ ನಲ್ಕುದುರೆ, ದಾವಣಗೆರೆ ಉತ್ತರದ ಅಧ್ಯಕ್ಷರಾಗಿ ಸಿದ್ದೇಶ್ ಚಂದ್ರ ಅವರು ಆಯ್ಕೆಯಾಗಿರುವುದಾಗಿ ತಿಳಿಸಿದ ಅವರು, ನೂತನ ಪದಾಧಿಕಾರಿಗಳಿಗೆ ಪಕ್ಷ ಸಂಘಟನೆ, ತತ್ವ, ಸಿದ್ಧಾಂತಗಳನ್ನು ಜನತೆಗೆ ಮುಟ್ಟಿಸುವ ಜವಾಬ್ದಾರಿ ನೀಡಲಾಗಿದೆ ಎಂದು ಹೇಳಿದರು.

## ರಿಯಾಯಿತಿಯಲ್ಲಿ ಬ್ರ್ಯಾಂಡೆಡ್ ಸಿದ್ಧ ಉಡುಪುಗಳ ಮಾರಾಟ



ದಾವಣಗೆರೆ, ಜೂ. 5 - ನಗರದ ಶಾಮನೂರು ಶಿವಶಂಕರಪ್ಪ ಕನ್ವೆನ್ಷನ್ ಸೆಂಟರ್, ಹೋಟೆಲ್ ಸದರ್ನ್ ಸ್ಟಾರ್‌ನಲ್ಲಿ 4 ದಿನಗಳ ಕಾಲ ಮಾರಾಟ ನಡೆಯುತ್ತಿದೆ.

ಬ್ರ್ಯಾಂಡೆಡ್ ಸಿದ್ಧ ಉಡುಪುಗಳ ಬೃಹತ್ ಸ್ಟಾಕ್‌ನಿಂದ ಕಂಪನಿ ಆರ್ಥಿಕ ಬಿಕ್ಕಟ್ಟಿನಲ್ಲಿದ್ದು, ಕಂಪನಿಯಿಂದ ನೇರವಾಗಿ ಗ್ರಾಹಕರಿಗೆ ಭಾರೀ ರಿಯಾಯಿತಿಯಲ್ಲಿ ನೀಡಲಾಗುತ್ತಿದೆ. 3 ಕೋಟಿ ರೂ.ಗಳ ಉಡುಪುಗಳು ಈಗ ಕೇವಲ 60 ಲಕ್ಷಕ್ಕೆ ನಗದು ರೂಪದಲ್ಲಿ ಮಾರಾಟ ಮಾಡಲು ಸಿದ್ದರಿದ್ದು, ಗ್ರಾಹಕರಿಗೆ 3 ದಿನಗಳವರಗೆ ಮಾತ್ರ ಈ ಅವಕಾಶವಿದೆ.

1000 ವಿವಿಧ ಪ್ರಕಾರದ ಜೆಂಟ್ಸ್, ಲೇಡಿಸ್ ಮತ್ತು ಕಿಡ್ಸ್, ಪ್ಯಾಂಟ್, ಟೀ-ಶರ್ಟ್, ಲೋವರ್, ಟಾಪ್, ಬರ್ಮುಡಾ, ಶರ್ಟ್, ಪ್ಯಾಂಟ್ ಇತರೆ ಕೇವಲ ರೂ. 250 ರಿಂದ 350/- ರೂ. ವರೆಗೆ ಮಾತ್ರ.

ಬಿಗ್ ಬ್ರ್ಯಾಂಡ್ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್ ಎಂ.ಆರ್.ಪಿ. ಬೆಲೆಯಲ್ಲಿದ್ದು, 1499/- ರಿಂದ 4999/- ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್ : ಸಿಲ್ಕ್ ಸ್ಟ್ರೆಚ್, ಮಸ್‌ರೈಸ್, ಸ್ಟ್ರೀಚ್, ಜೀನ್ಸ್, ಕಾಟನ್, ಪಾರ್ಟಿವೇರ್ ಸ್ಟ್ರೆಚ್, ಶರ್ಟ್, ಟಿ-ಶರ್ಟ್, ಪಾರ್ಟಿವೇರ್, ಬಿಸಿನೆಸ್ ಕ್ಲಾಸ್, ಆಫೀಸರ್ ವೇರ್, ಫಾರ್ಮುಲಾ, ಕ್ಯಾಷುಯಲ್ ಇತ್ಯಾದಿ ಇಂಡಿಯನ್ ಟ್ರೈನ್, ಸಿಡಿ ಕಲರ್ ಪ್ಲಸ್, ಲೀ, ಈಜೋಡ್, ನೇಟ್‌ಪ್ಲೇ, ಇಂಡಿಗೋ ನೇಷನ್, ಸ್ಕೂಲರ್ಸ್, ಕೇವಲ ಬರಿ ರೂ. 499 ರಿಂದ ರೂ. 999 ರವರಗೆ.

ಹುಡುಗಿಯರ ಟಾಪ್, ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಪ್ಯಾಂಟ್, ಪುಲೋವರ, ಜಾಕೆಟ್ ಇತ್ಯಾದಿ ಹುಡುಗರ ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಶರ್ಟ್, ಟೀ ಶರ್ಟ್, ಫ್ಯಾನ್ಸಿ ಡ್ರೆಸ್, ಜಾಕೆಟ್ ಒಂದು ತಿಂಗಳಿಂದ 12 ವರ್ಷದವರೆಗೆ ಮಕ್ಕಳಿಗಾಗಿ ಕೇವಲ ರೂ. 150 ರಿಂದ 499 ರೂ. ವರೆಗೆ ಮಾತ್ರ.

ಕುರ್ತಿ ಮತ್ತು ಪಾಶ್ಚಿಮಾತ್ಯ ಬಟ್ಟೆಗಳು ಕೇವಲ ರೂ. ಕೇವಲ 200, 400 ಮತ್ತು 600 ರೂ.ಗಳು ಮಾತ್ರ. ಬಿಗ್ ಆಫರ್ ರಾಜಸ್ಥಾನಿ ರಾಯಲ್ ಪ್ರಿಂಟೆಡ್ ಬೆಡ್‌ಶೀಟ್ಸ್, ಫಿಲೋ ಕವರ್, ಸೋಫಾ ಕವರ್ ಲಭ್ಯವಿವೆ.

## ಭಾವಸಾರ ವಿಜನ್ ಇಂಡಿಯಾದಿಂದ 10ರಂದು ಹೃದಯ ತಪಾಸಣೆ ಶಿಬಿರ




ದಾವಣಗೆರೆ, ಜೂ.5 - ನಗರದ ಎಸ್.ಎಸ್. ನಾರಾಯಣ ಹಾರ್ಟ್ ಸೆಂಟರ್ ಹಾಗೂ ಭಾವಸಾರ ವಿಜನ್ ಇಂಡಿಯಾ, ಹಳೇ ಕುಂದುವಾಡದ ಶ್ರೀ ಸದ್ಗುರು ಕರಿಬಸವೇಶ್ವರ ಟ್ರಸ್ಟ್ ಇವರ ಸಂಯುಕ್ತ ಆಶ್ರಯದಲ್ಲಿ ಹಳೇ ಕುಂದುವಾಡದಲ್ಲಿ ಉಚಿತ ಹೃದಯ ತಪಾಸಣೆ ಶಿಬಿರವನ್ನು ಇದೇ ದಿನಾಂಕ 10ರಂದು ಆಯೋಜಿಸಲಾಗಿದೆ.

ನಗರದ ಭಾವಸಾರ ವಿಜನ್ ಇಂಡಿಯಾ ಕೇಂದ್ರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಶಿಬಿರ ನಡೆಸುವ ಬಗ್ಗೆ ನಿರ್ಧರಿಸಲಾಗಿದೆ.

ಎದೆ ನೋವು, ಉಸಿರಾಟದ ತೊಂದರೆ, ಅನಿಯಮಿತ ಹೃದಯ ಬಡಿತ, ಭುಜದಲ್ಲಿ ನೋವು, ದುರ್ಬಲತೆ, ತಲೆ ತಿರುಗುವಿಕೆ, ಬೆವರುವುದು ಅಥವಾ ವಾಕರಿಕೆಯಂತಹ ಲಕ್ಷಣಗಳು ಇದ್ದರೆ ಉಚಿತ ಹೃದಯ ತಪಾಸಣೆ ಶಿಬಿರದಲ್ಲಿ ಪಾಲ್ಗೊಳ್ಳಬಹುದು.

ಶಿಬಿರದಲ್ಲಿ ಇಸಿಜಿ, 2ಡಿ ಇಕೋ ಸೌಲಭ್ಯ ಇದೆ. ಅಲ್ಲದೆ ವೈದ್ಯರೊಂದಿಗೆ ಸಮಾಲೋಚನೆ ನಡೆಸಬಹುದು.

ಹೆಚ್ಚಿನ ಮಾಹಿತಿಗೆ 78290 82341, 99009 83686, 90086 58848 ಅನ್ನು ಸಂಪರ್ಕ ಮಾಡಬಹುದು. ಹಳೇಕುಂದುವಾಡ ಗ್ರಾಮದಲ್ಲಿ ನಡೆಯುವ ಈ ಶಿಬಿರಕ್ಕೆ ಶ್ರೀ ಸದ್ಗುರು ಕರಿಬಸವೇಶ್ವರ ಟ್ರಸ್ಟ್ ಸ್ಥಳಾವಕಾಶ ನೀಡಿದೆ ಎಂದು ಭಾವಸಾರ ವಿಜನ್ ಇಂಡಿಯಾ ತಿಳಿಸಿದೆ.

## ಪರಿಸರ ಸಂರಕ್ಷಣೆಯ ಸಂಕಲ್ಪ ಮಾಡೋಣ

(3ನೇ ಪುಟದಿಂದ) ಮೂಲಕ ಗಿಡಗಳನ್ನು ಹೆಮ್ಮರವಾಗಿ ಬೆಳೆಸುವ ಸಂಕಲ್ಪಗೈದರು.

ಕೃಷಿ ಅರಣ್ಯ ಗಿಡಗಳ ಕುರಿತಾಗಿ ಮಾಹಿತಿ ಪತ್ರವನ್ನು ರೈತರಿಗೆ ನೀಡಲಾಯಿತು. ಗಿಡನಾಟಿ ಮಾಡಿ ಪೋಷಿಸಲು ಆಸಕ್ತರಿರುವ ನೂರು ಜನರಿಗೆ ಹಣ್ಣು-ಹಂಪಲು ಮತ್ತು ಅರಣ್ಯ ಸಸಿಗಳನ್ನು ವಿತರಿಸಲಾಯಿತು.

ತಾಲ್ಲೂಕು ಆರೋಗ್ಯ ಅಧಿಕಾರಿ ಚಂದ್ರಮೋಹನ್, ವಿವಿಧ ಇಲಾಖೆಗಳ ಅಧಿಕಾರಿಗಳು, ತಾಲ್ಲೂಕು ಆಡಳಿತ, ಅರಣ್ಯ ಇಲಾಖೆ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಿಬ್ಬಂದಿಗಳು, ಒಕ್ಕೂಟದ ಪದಾಧಿಕಾರಿಗಳು, ಸದಸ್ಯರು, ನಾಗರಿಕರು ಪಾಲ್ಗೊಂಡಿದ್ದರು.

ರಾಜೇಶ್ವರಿ ಟ್ಯೂಷನ್ ತರಗತಿಯ ವಿದ್ಯಾರ್ಥಿಗಳು ಪರಿಸರ ಗೀತೆ ಹಾಡಿದರು. ಗಣಪತಿ ಮಾಳಂಜಿ ಸ್ವಾಗತಿಸಿದರು. ಮೇಲ್ವಿಚಾರಕ ಮೃತ್ಯುಂಜಯ ನಿರೂಪಿಸಿದರು. ಅರಣ್ಯಾಧಿಕಾರಿ ಮೊಹಮ್ಮದ್ ರಿಜ್ವಾನ್ ವಂದಿಸಿದರು. ಮೇಲ್ವಿಚಾರಕರಾದ ಸಂತೋಷ್.ಕೆ, ಪ್ರವೀಣ್‌ಕುಮಾರ್ ಮತ್ತು ಸೇವಾ ಪ್ರತಿನಿಧಿಗಳಾದ ಗೌರಮ್ಮ, ಸುನೀತಾ ಸಹಕರಿಸಿದರು.

## ಸಂತೋಷ್‌ಗೆ ನಾಲ್ಕನೇ ಸ್ಥಾನ



ದಾವಣಗೆರೆ, ಜೂ. 5- ಏಷ್ಯಾ ಖಂಡದ ಯೋಗ ರಾಷ್ಟ್ರೀಯ ಫೆಡರೇಶನ್ ವತಿಯಿಂದ ರಜತ ಮಹೋತ್ಸವದ ಪ್ರಯುಕ್ತ ಈಚೆಗೆ ಪಶ್ಚಿಮ ಬಂಗಾಳದಲ್ಲಿ ನಡೆದ ನ್ಯಾಷನಲ್ ಯೋಗಾಸನ ಸ್ಪರ್ಧೆಯಲ್ಲಿ ಆರ್.ಎಲ್.ಕಾನೂನು ಕಾಲೇಜಿನ ವಿದ್ಯಾರ್ಥಿ ಡಿ. ಸಂತೋಷ್ ಇವರು ಕರ್ನಾಟಕದಿಂದ ಭಾಗವಹಿಸಿ ನಾಲ್ಕನೇ ಸ್ಥಾನ ಪಡೆದಿದ್ದಾರೆ. ಕಾಲೇಜಿನ ವತಿಯಿಂದ ಪ್ರಾಂಶುಪಾಲ ಡಾ. ಎಂ. ಸೋಮಶೇಖರಪ್ಪ ಮತ್ತು ಇತರರು ಅಭಿನಂದಿಸಿದ್ದಾರೆ.

### ಓದುಗರ ಪತ್ರ

## ಪಟೇಲ್ ಬಡಾವಣೆಗೆ ಸಿಟಿ ಬಸ್ ಬಿಡಿ

**ಮಾನ್ಯರೇ,**

ನಗರದ ಶಾಮನೂರು ಬಳಿಯ ಜೆ.ಹೆಚ್. ಪಟೇಲ್ ಬಡಾವಣೆ ನಿರ್ಮಾಣವಾಗಿ 10 ವರ್ಷಗಳಾಗಿ ಸಾಕಷ್ಟು ಅಭಿವೃದ್ಧಿಯನ್ನೂ ಹೊಂದಿದೆ. ಸಾವಿರಾರು ಮನೆಗಳು ನಿರ್ಮಾಣದ ಹಂತದಲ್ಲಿವೆ. ಶಾಲೆಗಳು, ವಿದ್ಯಾರ್ಥಿ ನಿಲಯಗಳು ನಿರ್ಮಾಣವಾಗಿವೆ.

ಈ ಬಡಾವಣೆಯು ಶ್ರೀಮತಿ ನಾಗಮ್ಮ ಕೇಶವಮೂರ್ತಿ ಬಡಾವಣೆಗೆ ಹೊಂದಿಕೊಂಡಿದೆ. ಇಲ್ಲಿಂದ ನಿತ್ಯ ನೂರಾರು ಕೂಲಿ ಕಾರ್ಮಿಕರು, ವಿದ್ಯಾರ್ಥಿಗಳು ನಗರಕ್ಕೆ ಅಡ್ಡಾಡಲು ತುಂಬಾ ತೊಂದರೆಯಾಗುತ್ತಿದೆ. ಇಲ್ಲಿ ಆಟೋಗಳೂ ಸರಿಯಾಗಿ ಸಿಗುವುದಿಲ್ಲ. ಮುಖ್ಯವಾಗಿ ಈ ಬಡಾವಣೆಯಿಂದ ವಿದ್ಯಾರ್ಥಿಗಳು ಶಾಲೆಗೆ ಹೋಗಲು ಸಮಯಕ್ಕೆ ಸರಿಯಾಗಿ ಯಾವುದೇ ಸಾರಿಗೆ ಸೌಲಭ್ಯವೂ ಇಲ್ಲದಂತಾಗಿದೆ. ಆದ್ದರಿಂದ ದಯವಿಟ್ಟು ಪಟೇಲ್ ಬಡಾವಣೆಯಿಂದ ರಿಂಗ್ ರೋಡ್, ಜಿಲ್ಲಾಧಿಕಾರಿಗಳ ಮನೆ ರಸ್ತೆ ಮೂಲಕ ಸಂಗೊಳ್ಳಿ ರಾಯಣ್ಣ ವೃತ್ತದವರೆಗೂ ನಗರ ಸಾರಿಗೆ ವ್ಯವಸ್ಥೆ ಮಾಡುವಂತೆ ಮನವಿ ಮಾಡಿಕೊಳ್ಳುತ್ತೇವೆ.

**-ಜೆ.ಹೆಚ್. ಪಟೇಲ್ ಬಡಾವಣೆ ನಾಗರಿಕರು**

## ಶಬ್ಧ ಮಾಲಿನ್ಯ ವಾಹನಗಳಿಗೆ ಅನ್ವಯಿಸದೇ ?

**ಮಾನ್ಯರೇ,**

ರಾಜ್ಯ ಸರ್ಕಾರ ಶಬ್ಧ ಮಾಲಿನ್ಯ ತಡೆಯಲು ಇತ್ತೀಚೆಗೆ ಆರಾಧನಾ ಕೇಂದ್ರಗಳಿಗೂ ಬಿಡದೇ ನಿರ್ಬಂದ ಹಾಕಿದೆ. ಆದರೆ, ಈ ನಿರ್ಬಂಧ ರಸ್ತೆ ಮೇಲೆ ಸಂಚರಿಸುವ ವಾಹನಗಳಿಗೆ ಅನ್ವಯಿಸುವುದಿಲ್ಲವೇ ಎಂಬ ಪ್ರಶ್ನೆ ಹುಟ್ಟುತ್ತಿದೆ. ಏಕೆಂದರೆ ಕರ್ಕಶ ಹಾರ್ನ್‌ಗಳನ್ನು ಹಾಕಿಕೊಳ್ಳುವ ವಾಹನಗಳು ಹಾಗೂ ಸೈಲೆನ್ಸರ್ ಬದಲಿಸಿ ಬೆಚ್ಚಿ ಬೀಳಿಸುವ ವಾಹನಗಳು ನಗರದಲ್ಲಿ ಮುಂದುವರಿದೇ ಇವೆ.

ವಾಹನಗಳು ಅದರಲ್ಲೂ ಕೆಲ ಆಟೋಗಳು ಕರ್ಕಶ ಹಾರ್ನ್ ಹಾಕಿಕೊಂಡು ಜನರನ್ನು ಬೆಚ್ಚಿ ಬೀಳಿಸುತ್ತಿವೆ. ಕೆಲವರಂತೂ ಹುಡುಗಿಯರನ್ನು ಕಂಡಾಗ ಕರ್ಕಶ ಹಾರ್ನ್ ಬಾರಿಸುವ ಕೆಟ್ಟ ಪ್ರವೃತ್ತಿ ಬೆಳೆಸಿಕೊಂಡಿದ್ದಾರೆ.

ಸೈಲೆನ್ಸ್ ಕುಲಗೆಡಿಸಿ ಆರ್ಭಟದಿಂದ ಅಲೆದಾಡುವ ದ್ವಿಚಕ್ರ ವಾಹನ ಸಂಚಾರಿಗಳ ಕಾಟವೂ ಅತಿಯಾಗಿದೆ. ಈ ಆರ್ಭಟದ ಮಂದಿ ಮಾಡುವ ಸದ್ದಿನಿಂದ ಉಳಿದ ವಾಹನ ಸಂಚಾರಿಗಳು ಬೆಚ್ಚಿ ಬೀಳುವಂತಾಗಿದೆ. ಹಠಾತ್ತನೆ ಬರುವ ಸದ್ದಿನಿಂದ ಮೈ ಗುಂಗರಿಸಿ ಬೀಳುವಂತಾದರೆ ಗತಿ ಏನು? ಅನಾಹುತವಾದರೆ ಜವಾಬ್ದಾರಿ ಯಾರು?

ಇಂತಹ ಕರ್ಕಶ ಹಾರ್ನ್ ಹಾಗೂ ಸೈಲೆನ್ಸರ್ ಪ್ರಿಯರಿಗೆ ಎಚ್ಚರಿಕೆ ನೀಡಿ ಪೊಲೀಸರು ಕ್ರಮ ತೆಗೆದುಕೊಳ್ಳಲಿ. ಆರಾಧನಾ ಕೇಂದ್ರಗಳ ಮೇಲೆ ಹದ್ದಿನ ಕಣ್ಣಿಟ್ಟಿರುವ ರೀತಿಯಲ್ಲೇ ವಾಹನಗಳ ಕಡೆಗಳೂ ಗಮನ ಹರಿಸಿದರೆ ಸಾರ್ವಜನಿಕರ ರಸ್ತೆ ಸಂಚಾರ ಇನ್ನಷ್ಟು ಹಿತಕರವಾಗಲಿದೆ.

**- ಪರಮೇಶ್,** ದಾವಣಗೆರೆ.

## ಗಿಡ, ಮರ ಬೆಳೆಸುವುದರಿಂದ ಪರಿಸರ ಸಮತೋಲನ ಸಾಧ್ಯ



**ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್**

ದಾವಣಗೆರೆ, ಜೂ. 5- ನಮ್ಮ ಸುತ್ತಮುತ್ತ ಶೇ. 33 ರಷ್ಟು 'ಹಸಿರು ಹೊದಿಕೆ' ಇರಬೇಕು, ಆದರೆ ಭಾರತದಲ್ಲಿ ಶೇ. 24.5 ರಷ್ಟು ಹಸಿರು ಹೊದಿಕೆ ಇದೆ. ನಮ್ಮ ನಗರದಲ್ಲಿ ಶೇ. 12.1 ರಷ್ಟು ಹಸಿರು ಹೊದಿಕೆ ಇದೆ. ನಾವು ಗಿಡ, ಮರಗಳನ್ನು ಬೆಳೆಸುವುದರ ಮೂಲಕ ಪರಿಸರ ಸಮತೋಲನವನ್ನು ಕಾಯಬಹುದು. ಜೀವ ವೈವಿಧ್ಯತೆಯನ್ನು ಸಂರಕ್ಷಿಸಬೇಕು. ಪ್ರತಿ ವರ್ಷವೂ ಅರಣ್ಯ ಇಲಾಖೆ 1 ಲಕ್ಷ ಗಿಡ, ಮರ ಬೆಳೆಸಲು ಸಸಿಗಳನ್ನು ನೀಡುತ್ತಿದೆ. ಹುಲಿ ಸಂರಕ್ಷಣೆ ಪ್ರಮುಖವಾಗಿ ಆಗಬೇಕೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್ ಕರೆ ನೀಡಿದರು.

ನಗರದ ಸೇಂಟ್ ಜಾನ್ಸ್ ವಿದ್ಯಾಸಂಸ್ಥೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪರಿಸರ ಜಾಗೃತಿ ಕಾರ್ಯಕ್ರಮ ಮತ್ತು ಪರಿಸರ ರಕ್ಷಣೆ ಜಾಥಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಜ್ಯೋತಿ ಎನ್. ಉಪಾಧ್ಯಾಯ ಅವರು ಮಾತನಾಡಿ, 'ಇರುವುದೊಂದೇ ಭೂಮಿ' ಈ ಭೂಮಿಯ ಮಾಲಿನ್ಯವನ್ನು ತಡೆಯಬೇಕು ಮತ್ತು 'ಯೂಸ್ ಅಂಡ್ ಥ್ರೋ' ಪದ್ಧತಿಯನ್ನು ನಿಲ್ಲಿಸಬೇಕೆಂದು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿದರು.

'ಪರಿಸರ ಉಳಿಸಿ', 'ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ', 'ಪ್ಲಾಸ್ಟಿಕ್ ತ್ಯಜಿಸಿ ಪರಿಸರ ರಕ್ಷಿಸಿ', ಮೊದಲಾದ ಘೋಷಣೆಗಳನ್ನು ಕೂಗುತ್ತಾ ವಿದ್ಯಾರ್ಥಿಗಳು ಜಾಥಾ ಕೈಗೊಂಡು ಸಾರ್ವಜನಿಕರಲ್ಲಿ ಪರಿಸರ ಜಾಗೃತಿ ಮೂಡಿಸಿದರು.

## ರಾಜ್ಯ ಮಟ್ಟದ ಚಿತ್ರ ಬರೆಯುವ ಸ್ಪರ್ಧೆ

ದಾವಣಗೆರೆ, ಜೂ. 5- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಅಂತರರಾಷ್ಟ್ರೀಯ ಪರಿಸರ ದಿನಾಚರಣೆ ಅಂಗವಾಗಿ ರಾಜ್ಯ ಮಟ್ಟದ ಉಚಿತ ಚಿತ್ರ ಬರೆಯುವ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ.

ಸುರ್ಯೋದಯ, ಸೂರ್ಯಾಸ್ತಮಾನ, ಪ್ರಕೃತಿ ಸೃಷ್ಟಿ ಸೌಂದರ್ಯದ ಚಿತ್ರವನ್ನು ಎ-4 ಅಳತೆಯ ಸೈಜಿನ ಪೇಪರ್‌ನಲ್ಲಿ ಯಾವುದೇ ಕಲಾಪ್ರಕಾರಗಳಲ್ಲಿ ಬರೆದು, ಈ ಕೆಳಗಿನ ವಿಳಾಸಕ್ಕೆ ಇದೇ ದಿನಾಂಕ 10ರದೊಳಗೆ ಕೋರಿಯರ್ ಅಥವಾ ಅಂಚೆ ಮೂಲಕ ಸಾಲಿಗ್ರಾಮ ಗಣೇಶ್ ಶೆಣೈ, ಸಂಸ್ಥಾಪಕರು, ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ, 'ಕನ್ನಡ ಗುಡಿ' ಕಾವೇರಿ ಅಪಾರ್ಟ್‌ಮೆಂಟ್, ಕುಂದುವಾಡ ರಸ್ತೆ, ಮಹಾಲಕ್ಷ್ಮಿ ಬಡಾವಣೆ, ದಾವಣಗೆರೆ - 577006. ಈ ವಿಳಾಸಕ್ಕೆ ಕಳಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ 99022 22241, 98446 91391 ಈ ಮೊಬೈಲ್‌ಗಳಿಗೆ ಸಂಪರ್ಕಿಸಬಹುದು.



ಜನತಾವಾಣಿ ಸಿಬ್ಬಂದಿಗಳೊಂದಿಗೆ ತರಳಬಾಳು ಶ್ರೀಗಳು

## ಅಣೆಕಟ್ಟೆಗಳಿಗೆ ಹೂಳಿನ ಸಮಸ್ಯೆ

(1ನೇ ಪುಟದಿಂದ) ಪರಿಹಾರ ಎಂದು ಶ್ರೀಗಳು ತಿಳಿಸಿದರು. ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳ ಸುಮಾರು 100 ಕೆರೆಗಳಿಗೆ ನೀರು ತುಂಬುವ ಯೋಜನೆಗಳು ಜಾರಿಯಾಗುವ ಹಲವಾರು ಹಂತಗಳಲ್ಲಿದ್ದು, ಇವುಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಅಧಿಕಾರಿಗಳು ಜನ ಪ್ರತಿನಿಧಿಗಳು ಕ್ರಮ ತೆಗೆದುಕೊಳ್ಳುವ ಅಗತ್ಯವಿದೆ ಎಂದರು. ವಿಚಾರ ವಿನಿಮಯದುದ್ದಕ್ಕೂ ಶ್ರೀಗಳು ರೈತರು ಹಾಗೂ ಗ್ರಾಮೀಣರ ಜೀವನದ ಕುರಿತು ತಮ್ಮ ಕಳಕಳಿ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪತ್ರಿಕೆಯ ಉಪ ಸಂಪಾದಕ ಇ.ಎಂ. ಮಂಜುನಾಥ, ಜಗಳೂರಿನ ಬಿ.ಪಿ. ಸುಭಾನ್, ಹಿರಿಯ ಪತ್ರಕರ್ತರುಗಳಾದ ಎಂ.ಎಸ್. ಶಿವಶರಣಪ್ಪ, ಬಾ.ಮ. ಬಸವರಾಜಯ್ಯ, ಪತ್ರಿಕೆಯ ವರದಿಗಾರರಾದ ಓ.ಎನ್.ಸಿದ್ದಯ್ಯ ಒಡೆಯರ್, ಎಸ್.ಎ. ಶ್ರೀನಿವಾಸ್, ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ, ಜೆ.ಎಸ್. ವಸಂತ ಕುಮಾರ್, ಕೆ.ಎನ್. ಬಸವರಾಜ್, ಛಾಯಾಗ್ರಾಹಕ ಮೊಹಮ್ಮದ್ ರಫೀಕ್, ಭರಮಸಾಗರದ ಬಿ.ಜಿ. ಅನಂತ ಪದ್ಮನಾಭರಾವ್, ಹರಿಹರದ ವರದಿಗಾರ ಚಿದಾನಂದ ಎಂ. ಕಂಚಿಕೆರೆ, ಸಂಪಾದಕ ವಿಕಾಸ್ ಅವರ ಪುತ್ರಿ ಕು. ಪ್ರೇರಣ ವಿಕಾಸ್, ಗಣಕ ಯಂತ್ರ ವಿನ್ಯಾಸಕರಾದ ಶ್ರೀಮತಿ ಮಂಜುಳಾ ನಾಗರಾಜ್, ಶ್ರೀಮತಿ ಶೀಲಾ ವೀರಭದ್ರಪ್ಪ, ವ್ಯವಸ್ಥಾಪಕರಾದ ಶ್ರೀಮತಿ ಯಶೋಧ ಅಗಡಿಮಠ, ಗಣಕ ಯಂತ್ರ ನಿರ್ವಾಹಕರಾದ ಎಸ್.ಜೆ. ಹನುಮಂತರಾಜ್, ಸಂಗಮೇಶ್ ಸಾಲಿಮಠ, ಕೆ.ಎನ್. ವಿನಯ್, ಬಿ.ಹೆಚ್. ಮಂಜುನಾಥ್, ಪ್ರಿಂಟರ್ ಚಂದ್ರಪ್ಪ, ಡೇನಿಯಲ್ ಉಪಸ್ಥಿತರಿದ್ದರು.

## ಪ್ರಯಾಣವೇ ವಿಶ್ರಾಂತಿ

ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ಹಿಮಾಚಲ ಪ್ರದೇಶದಿಂದ ಭಾನುವಾರ ಬೆಳಗಿನ ಜಾವ 2 ಗಂಟೆಗೆ ಮರಳಿದ್ದರು. ಮರು ದಿನ 10.30ಕ್ಕೆ ಕಾರ್ಯನಿರತ ಪತ್ರಕರ್ತರ ಸಂಘದ ಪದಾಧಿಕಾರಿಗಳ ಸೇವಾ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ನಂತರ ಜನತಾವಾಣಿ ಪತ್ರಿಕೆಗೆ ಭೇಟಿ ನೀಡಿ ಉತ್ಸಾಹದಿಂದ ಸಂಪಾದಕ ಎಂ.ಎಸ್.ವಿಕಾಸ್ ಅವರ ಜೊತೆ ಸಂವಾದ ನಡೆಸಿದರು.

ಅಪಾರ ಕಾರ್ಯಭಾರದ ನಡುವೆ ಇಷ್ಟೊಂದು ಜೀವನೋತ್ಸಾಹ ಹೇಗೆ ಪಡೆಯುತ್ತೀರಾ? ಎಂಬ ಪ್ರಶ್ನೆಗೆ ಉತ್ತರಿಸಿದ ಶ್ರೀಗಳು, ಮನೋಭಾವ ಹೇಗಿರುತ್ತದೋ ಜೀವನ ಹಾಗಿರುತ್ತದೆ ಎಂದರು. ಪ್ರಯಾಣ ಬೇರೆಯವರಿಗೆ ಪ್ರಯಾಸ ಎನಿಸಬಹುದು. ಆದರೆ, ನನಗೆ ಪ್ರಯಾಣವೇ ವಿಶ್ರಾಂತಿ. ಪ್ರಯಾಣದ ವೇಳೆಯೇ ಮೊನ್ನೆ ಲೇಖನವೊಂದನ್ನು ಬರೆದಿದ್ದೆ. ಪ್ರಯಾಣದ ವೇಳೆಯೇ ಅಧ್ಯಯನ ಮಾಡುತ್ತೇನೆ. ಹೀಗಾಗಿ ಪ್ರಯಾಣದ ನಂತರ ಚೈತನ್ಯ ಕಡಿಮೆಯಾಗುವ ಬದಲು ಹೆಚ್ಚಾಗಿರುತ್ತದೆ ಎಂದು ಹೇಳಿದರು.

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿಯಾಗಿ ವಾಸಂತಿ ಉಪ್ಪಾರ್




ದಾವಣಗೆರೆ, ಜೂ. 5 - ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ದಾವಣಗೆರೆ ಜಿಲ್ಲೆಯ ಉಪನಿರ್ದೇಶಕರಾಗಿದ್ದ ಕೆ.ಹೆಚ್. ವಿಜಯಕುಮಾರ್ ಅವರನ್ನು ಬಳ್ಳಾರಿ ಜಿಲ್ಲೆಗೆ ವರ್ಗಾಯಿಸಿ ಇವರ ಸ್ಥಾನಕ್ಕೆ ತುಮಕೂರಿನಲ್ಲಿದ್ದ ಶ್ರೀಮತಿ ವಾಸಂತಿ ಉಪ್ಪಾರ್ ಅವರನ್ನು ವರ್ಗಾಯಿಸಿ ಸರ್ಕಾರ ಆದೇಶಿಸಿದೆ.

## ಬಿಜೆಪಿ ಓಬಿಸಿ ಮೋರ್ಚಾಕ್ಕೆ ಆನಂದಪ್ಪ



ದಾವಣಗೆರೆ,ಜೂ. 5- ಜಿಲ್ಲಾ ಹಿಂದುಳಿದ ವರ್ಗಗಳ ಬಿಜೆಪಿ ಮೋರ್ಚಾದ ಕೋಶಾಧ್ಯಕ್ಷರಾಗಿ ಎಸ್.ಎಲ್. ಆನಂದಪ್ಪ ಅವರನ್ನು ನೇಮಕ ಮಾಡಲಾಗಿದೆ ಎಂದು ಮೋರ್ಚಾದ ಜಿಲ್ಲಾಧ್ಯಕ್ಷ ಕೆ.ಬಸವರಾಜ್ ತಿಳಿಸಿದ್ದಾರೆ.


ಪ್ರವೇಶ ಪ್ರಕಟಣೆ 2022-23



ಎಸ್.ಎಲ್. ಪದವಿ ಪೂರ್ವ ಕಾಲೇಜ್

ಎಸ್. ನಿಜಲಿಂಗಪ್ಪ ಬಡಾವಣೆ, ಬಕ್ಕೇಶ್ವರ ಕಲ್ಯಾಣ ಮಂಟಪದ ಎದುರು, ದಾವಣಗೆರೆ-4.

2022-23ನೇ ಶೈಕ್ಷಣಿಕ ಸಾಲಿಗೆ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಈ ಕೆಳಕಂಡ ವಿಭಾಗಗಳಿಗೆ ಪ್ರವೇಶಾವಕಾಶವಿರುತ್ತದೆ.

ಕಲಾ ವಿಭಾಗ - HEPS, HEPG, HEKS

ವಾಣಿಜ್ಯ ವಿಭಾಗ -ABES

- ನುರಿತ ಉಪನ್ಯಾಸಕರಿಂದ ಬೋಧನೆ
- ಪ್ರತಿ ತಿಂಗಳು ಕಿರು ಪರೀಕ್ಷೆ ನಡೆಸಲಾಗುವುದು.

ದಾಖಲಾತಿಗಾಗಿ ಅರ್ಜಿ ಪಡೆಯಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ

ಮೊಬೈಲ್ : 82963 79619, 99640 05949, 99006 04511

ಸಹಿ/- ಕಾರ್ಯದರ್ಶಿ    ಸಹಿ/- ಪ್ರಾಂಶುಪಾಲರು

ಹೃತ್ಪೂರ್ವಕ ಅಭಿನಂದನೆಗಳು



ಕರ್ನಾಟಕ ವಿಧಾನ ಪರಿಷತ್‌ಗೆ ನೂತನ ಸದಸ್ಯರಾಗಿ ಆಯ್ಕೆಯಾಗಿರುವ ನಾಯಕ ಸಮಾಜದ ಮಹಿಳಾ ಮುಖಂಡರಾದ

ಶ್ರೀಮತಿ ಹೇಮಲತಾ ನಾಯಕ ಹಾಗು

3ನೇ ಬಾರಿಗೆ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿರುವ ದಾವಣಗೆರೆ ನಗರದ ಅಲ್ಪ ಸಂಖ್ಯಾತರ ಮುಖಂಡರಾದ

ಶ್ರೀ ಅಬ್ದುಲ್ ಜಬ್ಬಾರ್ ಸಾಬ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಶುಭ ಕೋರುವವರು :

* ಜಿಲ್ಲಾ ನಾಯಕ ವಾಲ್ಮೀಕಿ ಸಮಾಜ, ದಾವಣಗೆರೆ.
* ನಾಯಕ ವಿದ್ಯಾರ್ಥಿ ನಿಲಯ, ದಾವಣಗೆರೆ.
* ತಾಲ್ಲೂಕು ನಾಯಕ ಸಮಾಜ, ದಾವಣಗೆರೆ.
* ಜಿಲ್ಲಾ ವಾಲ್ಮೀಕಿ ನಾಯಕ ಮಹಿಳಾ ಘಟಕ, ದಾವಣಗೆರೆ.
* ಜಿಲ್ಲಾ ನಾಯಕ ಸರ್ಕಾರಿ ನೌಕರರ ಸಂಘ, ದಾವಣಗೆರೆ.

ಸಮಸ್ತ ವಾಲ್ಮೀಕಿ ನಾಯಕ ಸಮಾಜ ಬಂಧುಗಳು


## ಸಿಜೇರಿಯನ್ ಹೆರಿಗೆಗೆ ಹೆಚ್ಚು ಆದ್ಯತೆ ಬೇಡ : ಡಿಸಿ ಬೀಳಗಿ ಕರೆ

ದಾವಣಗೆರೆ, ಜೂ.5- ವೈದ್ಯರನ್ನು ದೇವರ ಸಮಾನ ಎಂದು ನೋಡುವ ದೇಶ ನಮ್ಮದು. ಹಾಗಾಗಿ ವೈದ್ಯ ವೃತ್ತಿಯಲ್ಲಿರುವವರು ದೇವರು ಮೆಚ್ಚುವಂತೆ ಕೆಲಸ ಮಾಡಬೇಕು. ಸಿಜೇರಿಯನ್ ಹೆರಿಗೆಗೆ ಹೆಚ್ಚು ಒಲವು ತೋರದೆ ಸಾಮಾನ್ಯ ಹೆರಿಗೆಗೆ ಹೆಚ್ಚು ಒತ್ತು ನೀಡಿ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ವೈದ್ಯರಿಗೆ ಕರೆ ನೀಡಿದರು.

ಜಿಲ್ಲಾಡಳಿತ ಭವನದಲ್ಲಿ ಶನಿವಾರ ನಡೆದ ಜಿಲ್ಲಾ ಆರೋಗ್ಯ ಅಭಿಯಾನ ಕಾರ್ಯಕಾರಿ ಸಮಿತಿ ಸಭೆಯ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಹಾಗೂ ಚಟುವಟಿಕೆಗಳ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಂಕಿ-ಅಂಶಗಳ ಪ್ರಕಾರ ಸಿಜೇರಿಯನ್ ಹೆರಿಗೆಗಳ ಪ್ರಮಾಣ ಜಾಸ್ತಿ ಇದೆ. ಸಾಮಾನ್ಯ ಹೆರಿಗೆ ಮಾಡಿಸಲು ಏಕೆ ಸಾಧ್ಯವಿಲ್ಲ? ಕೆಲ ಕ್ಲಿಷ್ಟಕರ ಸಂದರ್ಭಗಳಲ್ಲಿ ಹೊರತುಪಡಿಸಿ ಹೆಚ್ಚು ಸಿಜೇರಿಯನ್ ಹೆರಿಗೆಗಳಿಗೆ ಅವಕಾಶ ಬೇಡ ಎಂದರು.

ಈ ಹಿಂದಿನ ವರ್ಷಗಳಲ್ಲಿ ದಾವಣಗೆರೆ ಆರೋಗ್ಯ ಇಲಾಖೆಯ ಕಾರ್ಯಪ್ರಗತಿ ನಂಬರ್ ಒನ್ ಸ್ಥಾನದಲ್ಲಿರುತ್ತಿತ್ತು. ನಂತರದ ದಿನಗಳಲ್ಲಿ ಬರುಬರುತ್ತಾ ರ್‍ಯಾಂಕಿಂಗ್‌ನಲ್ಲಿ ಕೆಳಗಿನಿಂದ ನಾಲ್ಕೈದು ಸ್ಥಾನಗಳಲ್ಲಿ ಕಾಣಿಸಿಕೊಳ್ಳುತ್ತಿದ್ದೇವೆ.ಬಹಳ ಕ್ರಿಯಾಶೀಲ ಅಧಿಕಾರಿಗಳು, ವೈದ್ಯರು ಜಿಲ್ಲೆಯಲ್ಲಿದ್ದೀರಿ, ಕೆಲಸದ ಕಡೆ ಗಮನ ನೀಡದೆ ಹೀಗಾಗಿದೆ. ಮುಂದಿನ ದಿನಗಳಲ್ಲಿ ಸರಿಪಡಿಸಿಕೊಳ್ಳದಿದ್ದರೆ ಸಹಿಸಲು ಸಾಧ್ಯವಿಲ್ಲ ಎಂದರು.

ಜಿಲ್ಲೆಯಲ್ಲಿ ಲಸಿಕಾಕರಣ ವೇಗ ಪಡೆದುಕೊಳ್ಳಬೇಕು, ಪೋಲಿಯೋ ನಿರ್ಮೂಲನೆ ಈಗಾಗಲೇ ಆಗಿದ್ದು ದಡಾರ, ರುಬೆಲ್ಲಾ ನಿರ್ಮೂಲನೆಗೂ ಸರ್ಕಾರ ಶ್ರಮಿಸುತ್ತಿದ್ದು ಆರೋಗ್ಯ ಇಲಾಖೆ ಸಿಬ್ಬಂದಿ ಕೈ ಜೋಡಿಸಬೇಕೆಂದರು ಹಾಗೂ ಶಾಲಾ ಲಸಿಕಾಕರಣ ಜೂನ್ 15 ರೊಳಗೆ ಮುಗಿಸಬೇಕೆಂದರು. ಶಿಶು ಮರಣ ತಗ್ಗಿಸುವುದರೊಂದಿಗೆ ಮಕ್ಕಳು, ಗರ್ಭಿಣಿಯರು, ವಯೋವೃದ್ಧರ ಬಗ್ಗೆ ಕಾಳಜಿ ಇರಲಿ ಎಂದರು.

ಡಾ. ನಟರಾಜು ಮಾಹಿತಿ ನೀಡಿ ಮಲೇರಿಯ ಮಾಸಾಚರಣೆ ಆಚರಿಸಲಾಗುತ್ತಿದ್ದು, ಹಿಂದಿನ ವರ್ಷ ಮೂರು ಕೇಸ್ ದಾಖಲಾಗಿದ್ದು ಬಿಟ್ಟರೆ ಈ ವರ್ಷ ಯಾವುದೇ ಮಲೇರಿಯಾ ಪ್ರಕರಣಗಳು ಕಂಡುಬಂದಿಲ್ಲ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಚನ್ನಪ್ಪ ಎ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ನಾಗರಾಜ್, ಡಾ.ರಾಘವನ್, ಆರ್‌ಸಿಹೆಚ್ ಡಾ. ಮೀನಾಕ್ಷಿ, ಎಸ್‌ಎಂಒ ಡಾ.ಶ್ರೀಧರ್ ಸೇರಿದಂತೆ ವಿವಿಧ ಜಿಲ್ಲಾ ಮಟ್ಟದ ಆರೋಗ್ಯಾಧಿಕಾರಿಗಳು ಹಾಜರಿದ್ದರು.

## ಅವಿನಾಶ್ ಅವರಿಗೆ ಕಸಾಪ ಅಭಿನಂದನೆ



ದಾವಣಗೆರೆ, ಜೂ.5- ಕೇಂದ್ರ ಲೋಕಸೇವಾ ಆಯೋಗವು 2021 ನೇ ಸಾಲಿನಲ್ಲಿ ನಡೆಸಿದ ಭಾರತೀಯ ಆಡಳಿತ ಸೇವೆಯ ಪರೀಕ್ಷೆಯಲ್ಲಿ ರಾಷ್ಟ್ರ ಮಟ್ಟದಲ್ಲಿ 31ನೇ ಸ್ಥಾನವನ್ನು ಕರ್ನಾಟಕ ರಾಜ್ಯಕ್ಕೆ ಪ್ರಥಮ ಸ್ಥಾನವನ್ನು ಪಡೆದ ಅವಿನಾಶ್ ವಿ.ರಾವ್ ಅವರನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ ಮತ್ತು ಅವರ ತಂಡದವರು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ರವರ 138ನೇ ಜನ್ಮ ದಿನದ ಶುಭ ಸಂದರ್ಭದಲ್ಲಿ ಅವರ ನಿವಾಸದಲ್ಲಿ ಅಭಿನಂದಿಸಿದರು.

## ಹೆಡ್ ಕಾನ್ಸ್‌ಟೇಬಲ್ ಹುದ್ದೆಗೆ ಅರ್ಜಿ

ದಾವಣಗೆರೆ,ಜೂ. 5 - ಭಾರತ ಸರ್ಕಾರದ ಸಿಬ್ಬಂದಿ ನೇಮಕಾತಿ ಆಯೋಗದ ವತಿಯಿಂದ ಹೆಡ್ ಕಾನ್ಸ್‌ಟೇಬಲ್ (ಮಿನಿಸ್ಟೀರಿಯಲ್) ದೆಹಲಿ ಪೊಲೀಸ್ ಪಡೆಯಲ್ಲಿ ಖಾಲಿಯಿರುವ ಹುದ್ದೆಗಳ ನೇಮಕಾತಿಗಾಗಿ ಪಿ.ಯು.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಪಡೆದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ಈ ಸ್ಪರ್ಧಾತ್ಮಕ ಪರೀಕ್ಷೆಯು ಕಂಪ್ಯೂಟರ್ ಆಧಾರಿತವಾಗಿದ್ದು, ಆಸಕ್ತ ಅಭ್ಯರ್ಥಿಗಳು ಈ ವೆಬ್‌ಸೈಟ್ ಮೂಲಕ www.ssckkr.kar.nic.in & https://ssc.nic.in. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜೂ.16 ಕೊನೆಯ ದಿನವಾಗಿರುತ್ತದೆ. ದಿನಾಂಕ 01-01-2022 ಕ್ಕೆ ವಯಸ್ಸು 18 ರಿಂದ 25 ವರ್ಷದೊಳಗಿರಬೇಕು.

ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ – 080-25502520 / 2557342 ಅಥವಾ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ದಾವಣಗೆರೆ. ದೂರವಾಣಿ ಸಂಖ್ಯೆ : 08192-259446 ನ್ನು ಸಂಪರ್ಕಿಸಬಹುದೆಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ಗಿರೀಶ್ ತಿಳಿಸಿದ್ದಾರೆ.


ಗ್ರಾಹಕರ ಭಾರೀ ಒತ್ತಾಯದ ಮೇರೆಗೆ ಸೇಲ್ 4 ದಿನಗಳ ಕಾಲ ಮುಂದುವರಿಸಲಾಗಿದೆ

ದಾವಣಗೆರೆ ನಾಗರಿಕರಿಗೆ ನಂಬಲಸಾಧ್ಯವಾದ ಮಾರಾಟ

ಅತಿ ದೊಡ್ಡ ರಿಯಾಯಿತಿ ಸಮ್ಮರ್ ಮಾರಾಟ

ಕಂಪನಿಯಿಂದ ನೇರವಾಗಿ ಗ್ರಾಹಕರಿಗೆ

ಬ್ರಾಂಡೆಡ್ ರೆಡಿಮೇಡ್ ಉಡುಪುಗಳ ಬೃಹತ್ ಸ್ಟಾಕ್‌ನಿಂದಾಗಿ ಗೋದಾಮಿನಲ್ಲಿ ಸಂಗ್ರಹವಾಯಿತು. ಇದು ಕಂಪನಿಯು ಆರ್ಥಿಕ ಬಿಕಟ್ಟಿನ ಕಡೆಗೆ ಎದುರಿಸಿತು, ಆದ್ದರಿಂದ ಕಂಪನಿಯು ದಾವಣಗೆರೆ ಗ್ರಾಹಕರಿಗೆ ಭಾರಿ ರಿಯಾಯಿತಿ ನೀಡಲು ನಿರ್ಧರಿಸಿದೆ 3 ಕೋಟಿ ರೂಪಾಯಿಗಳ ರೆಡಿಮೇಡ್ ಉಡುಪುಗಳನ್ನು ಈಗ ಕೇವಲ 60 ಲಕ್ಷಕ್ಕೆ ನಗದು ರೂಪದಲ್ಲಿ ಮಾರಾಟ ಮಾಡಲು ನಿರ್ಧರಿಸಿದೆ ಮತ್ತು 4 ದಿನಗಳಲ್ಲಿ ಬಾಕಿ ಸರಕನ್ನು ಮಾರಾಟ ಮಾಡಲಾಗುವುದು.

ಹೋಟೆಲ್ ಹೋಟೆಲ್ ಸದರ್ನ್ ಸ್ಟಾರ್, ದಾವಣಗೆರೆ ಸೇಲ್ 4 ದಿನಗಳು.

Sincere Request : To the customers to maintain silence during shopping

1,000 ವಿವಿಧ ಪ್ರಕಾರದ ಜಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್, ಟೀ–ಶರ್ಟ್, ಲೋವರ್, ಟಾಪ್, ಬರ್ಮುಡಾ, ಕೇಪ್ರಿ, ಪ್ಲಾಜೊ, ಇತರೆ

ಕೇವಲ ರೂ. 200/- ರಿಂದ 350/- ರವರೆಗೆ

ಬಿಗ್ ಬ್ರಾಂಡ್ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್ : MRP : 1499/- to 4999/-

ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್ : ಸಿಲ್ಕ್‌ಸ್ಟ್ರೀಚ್, ಮಸ್‌ರೈಸ್ ಸ್ಟ್ರೆಚ್, ಸ್ಟ್ರೆಚ್ ಚಿನ್ನೂಸ್ ಕಾಟನ್, ಸಾರ್ಟಿನ್ ಸ್ಟ್ರೆಚ್ ಇತ್ಯಾದಿ.

ಶರ್ಟ್, ಟಿ–ಶರ್ಟ್ : ಪಾರ್ಟಿವೇರ್, ಬೆಸ್‌ನೆಸ್‌ಕ್ಲಾಸ್, ಆಫೀಸ್‌ವೇರ್, ಫಾರ್ಮಲ್, ಕ್ಯಾಷ್ಯುಯಲ್ ಇತ್ಯಾದಿ.

INDIAN TERRAIN, ColorPlus, DANIEL HECHTER, Lee, Pepe Jeans LONDON, IZOD, NETPLAY, INDIGO NATION, SCULLERS

Only in Rs. 499/- to 999/-

ಬ್ರಾಂಡೆಡ್ ಲೇಡಿಸ್ ಕುರ್ತಿಸ್ ಮೇಳಾ, ಕುರ್ತಿ ಮತ್ತು ಪಶ್ಚಿಮಾತ್ಯ ಬಟ್ಟೆಗಳು

BIBA, JACK&JONES, DNMX, AJIO, ELINI, abof, avaasa — MRP Up to Rs. 4999/-

Only in Rs. 200 /-, 400/- & 600/-

ಬಿಗ್ ಬ್ರಾಂಡ್ ಕಿಡ್ಸ್ ಮೇಳ — MRP upto Rs.1999/-

ಹುಡಗಿಯರ : ಟಾಪ್, ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಫ್ಯಾನ್ಸಿ ಫ್ರಾಕ್, ಫ್ಯಾನ್ಸಿ ಡ್ರೆಸ್, ಪುಲೋವರ್, ಜಾಕೆಟ್ ಇತ್ಯಾದಿ ಹುಡುಗರ : ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಶರ್ಟ್, ಟೀ-ಶರ್ಟ್, ಪುಲೋವರ್, ಫ್ಯಾನ್ಸಿ ಡ್ರೆಸ್, ಜಾಕೆಟ್ ಇತ್ಯಾದಿ

wow mom — ಕೇವಲ ರೂ: 150/- ರಿಂದ 499/- ಮಾತ್ರ — Size 1 Month to 12 Years — Disney


BIG OFFER Rajasthani Royal Printed Bedsheets , Pillow cover, Sofa cover etc

JACK&JONES, NETWORK — Big Branded BLAZER MRP upto Rs. 11,999/-

Now Sale in only Rs. 999/-to 1999/-

Note : 1 This sale is only for Retail customers Just for 4 days. 2 Wholesale Dealers will not be entertained. 3 We are selling on Such low prices just to collect cash.

ಆಫರ್ 4 ದಿನಗಳು ಮಾತ್ರ 6 7 8 ಮತ್ತು 9 ಜೂನ್ 2022 ಸಮಯ: 10 am to 9 pm NO LUNCH BREAK



ಹೋಟೆಲ್ ಸದರ್ನ್ ಸ್ಟಾರ್

(ಶಾಮನೂರು ಶಿವಶಂಕರಪ್ಪ ಕನ್ವೆನ್‌ಷನ್ ಸೆಂಟರ್)

# 3993/23, ಶಾಮನೂರು ರೋಡ್, ಎಸ್.ಎಸ್. ಲೇಔಟ್, ಎ ಬ್ಲಾಕ್, ಕುವೆಂಪು ನಗರ ದಾವಣಗೆರೆ-577004

HOTEL SOUTHERN STAR (Shamanur Shivashankarappa Convention Centre)

#3993/23, Shamanur Road, SS Layout A Block, Kuvempu Nagar, DAVANGERE-577 004

FREE PARKING ENTRANCE

All Major Debit / Credit Cards. Google Pay, PhonePe Accepted

As per Govt. Rules Please Wear Mask & Maintain Scoial Distance


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte